ಸಂಪುಟ: 01 ಸಂಚಿಕೆ: 07 ಪುಟ: 04 ಬೆಲೆ: 02 ಗುರುವಾರ ಜೂನ್ 11 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಸತ್ಯದ ಧ್ವನಿ... ಜನರ ನುಡಿ....

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:07 Pages:04 Price:02 THURSDAY JUNE 11 2026 RNI NO: KNKAN/26/A4008 E-mail:ajathashathru2026@gmail.com

## ನೆಹರೂ ದಾಖಲೆ ಮುರಿದ ಮೋದಿಗೆ ಯುಎಸ್ ಸೆನೆಟರ್ ಕಾರ್ನಿನ್ ಅಭಿನಂದನೆ

ಅ.ಶ. ಸುದ್ದಿ ವಾಷಿಂಗ್ಟನ್

ವಾಷಿಂಗ್ಟನ್: ಸೆನೆಟ್ ಇಂಡಿಯಾ ಕಾಕಸ್‌ನ ಸಹ-ಅಧ್ಯಕ್ಷರಾದ ಯುಎಸ್ ಸೆನೆಟರ್ ಜಾನ್ ಕಾರ್ನಿನ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಅತಿ ಹೆಚ್ಚು ಕಾಲ ಚುನಾಯಿತ ಪ್ರಧಾನಿಯಾಗಿ ಆಯ್ಕೆಯಾಗಿದ್ದಕ್ಕಾಗಿ ಅಭಿನಂದಿಸಿದ್ದಾರೆ ಮತ್ತು ಅವರ ಅಧಿಕಾರಾವಧಿಯು ಪರಿವರ್ತನೆಗೆ ಕಡಿಮೆಯಿಲ್ಲ ಎಂದು ಹೇಳಿದ್ದಾರೆ. ನರೇಂದ್ರ ಮೋದಿ ಅವರು ಭಾರತದ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಪ್ರಧಾನಿಯಾದರು, 4,399 ದಿನಗಳ ನಿರಂತರ ಅಧಿಕಾರಾವಧಿಯೊಂದಿಗೆ, ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಮೀರಿಸಿದ್ದಾರೆ.



ಭಾರತದ ಅತಿ ಹೆಚ್ಚು ಕಾಲ ಚುನಾಯಿತ ಪ್ರಧಾನಿಯಾಗಿ ಆಯ್ಕೆಯಾದ ಪ್ರಧಾನಿ ಮೋದಿ ಅವರಿಗೆ ಅಭಿನಂದನೆಗಳು ಮೂರು ಪ್ರಜಾಪ್ರಭುತ್ವದ ಆದೇಶಗಳಲ್ಲಿ 1.4 ಶತಕೋಟಿ ಜನರ ನಂಬಿಕೆಯ ಮೂಲಕ ಗಳಿಸಿದ 4,399 ದಿನಗಳ ನಾಯಕತ್ವ ಎಂದು ಟೆಕ್ಸಾಸ್‌ನ ರಿಪಬ್ಲಿಕನ್ ಸೆನೆಟರ್ ಕಾರ್ನಿನ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. 250 ಮಿಲಿಯನ್ ಜನರನ್ನು ಬಡತನದಿಂದ ಮೇಲಕ್ಕೆತ್ತುವುದರಿಂದ ಹಿಡಿದು ಭಾರತವನ್ನು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯನ್ನಾಗಿ ಮಾಡುವವರೆಗೆ, ಪ್ರಧಾನಿ ಮೋದಿಯವರ ಅಧಿಕಾರಾವಧಿಯು ಪರಿವರ್ತನೆಗೆ ಕಡಿಮೆಯಿಲ್ಲ. ಯುಎಸ್-ಭಾರತ ಪಾಲುದಾರಿಕೆ ಎಂದಿಗೂ ಬಲಿಷ್ಠವಾಗಿಲ್ಲ ಎಂದು ಕಾರ್ನಿನ್ ಹೇಳಿದರು. 1952 ರಲ್ಲಿ ಮೊದಲ ಬಾರಿಗೆ ಈ ಹುದ್ದೆಗೆ ಆಯ್ಕೆಯಾದ ನೆಹರು, ಮೇ 13 ರಂದು ಪ್ರಮಾಣವಚನ ಸ್ವೀಕರಿಸಿದರು ಮತ್ತು ಮೇ 27, 1964 ರವರೆಗೆ ಅಧಿಕಾರ ವಹಿಸಿಕೊಂಡರು 4,398 ದಿನಗಳ ಅಧಿಕಾರಾವಧಿ.1947-52 ರವರೆಗಿನ ನೆಹರು ಅವರ ಹಿಂದಿನ ಅವಧಿಯು ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿದ್ದರು ಏಕೆಂದರೆ ಚುನಾವಣೆಗಳು ಇನ್ನೂ ಸಾಂಸ್ಥಿಕೀಕರಣಗೊಂಡು ನಡೆಯಬೇಕಾಗಿತ್ತು. 1966 ರಿಂದ 1984 ರವರೆಗೆ 14 ವರ್ಷಗಳ ಕಾಲ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾಗಿ ಮುರಿದ ಅಧಿಕಾರಾವಧಿಯನ್ನು ಹೊಂದಿದ್ದರು.

## ಸಂಪುಟ ವಿಸ್ತರಣೆ ಮತ್ತು ಖಾತೆ ಕ್ಯಾತೆ ಸರಿಪಡಿಸಲು

# ದೆಹಲಿಯಲ್ಲಿ ಸಿಎಂ ಡಿಕೆಶಿ ಕಸರತ್ತು

**ನವದೆಹ: ಖಾತೆ ಹಂಚಿಕೆ ಅಸಮಾಧಾನ ಬಗೆಹರಿಸುವುದು ಹಾಗೂ ಸಂಪುಟ ವಿಸ್ತರಣೆ ಕುರಿತಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಕಾಂಗ್ರೆಸ್ ಹೈಕಮಾಂಡ್ ಜೊತೆ ಸಮಾಲೋಚನೆ ನಡೆಸಿದ್ದಾರೆ. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ಮೊದಲ ಬಾರಿಗೆ ಹೈಕಮಾಂಡ್ ಭೇಟಿಗಾಗಿ ಡಿಕೆಶಿ ದೆಹಲಿಗೆ ಆಗಮಿಸಿದ್ದಾರೆ. ಹೈಕಮಾಂಡ್ ನಾಯಕರಿಗೆ ಡಿಕೆಶಿ ತಮನ್ನು ಮುಖ್ಯಮಂತ್ರಿ ಮಾಡಿದ್ದಕ್ಕಾಗಿ ಧನ್ಯವಾದ ಸಮರ್ಪಣೆ ಮಾಡಲಿದ್ದಾರೆ.**



ಇಂದು ಬೆಳಿಗ್ಗೆ ಬೆಂಗಳೂರಿನಿಂದ ದೆಹಲಿಗೆ ಆಗಮಿಸಿದ ಮುಖ್ಯಮಂತ್ರಿ ಎಐಸಿಸಿ ಕಚೇರಿಗೆ ಭೇಟಿ ನೀಡಿದರು. ಬಳಿಕ ಎನ್‌ಎಸ್‌ಯುಐ ಕಚೇರಿ, ಯುವ ಕಾಂಗ್ರೆಸ್ ಕಚೇರಿ, ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಕಚೇರಿಗಳಿಗೆ ಭೇಟಿ ನೀಡಿದರು. ಸಚಿವ ಕೃಷ್ಣಭೈರೇಗೌಡ ಸೇರಿದಂತೆ ಕೆಲವು ಸಚಿವರು ಹಂಚಿಕೆ ಮಾಡಿರುವ ಖಾತೆ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ. ಜಲಸಂಪನೂಲ ಸಚಿವ ರಾಮಲಿಂಗಾರೆಡ್ಡಿ ಅವರ ಖಾತೆ ಅಸಮಾಧಾನಕ್ಕೆ ತೆರೆ ಬಿದ್ದ ನಂತರವೂ ಕೆಲವು ಸಚಿವರು ಖಾತೆ ಹಂಚಿಕೆ ಕುರಿತಂತೆ ತಮ ಬೇಸರ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಕೃಷ್ಣಭೈರೇಗೌಡ ಅವರು ದೆಹಲಿಯಲ್ಲಿ ಬೀಡುಬಿಟ್ಟಿದ್ದು, ನೀಡಿರುವ ಖಾತೆ ಬಗ್ಗೆ ಹೈಕಮಾಂಡ್ ನಾಯಕರ ಮುಂದೆ ಅಸಮಾಧಾನ ತೋಡಿಕೊಂಡಿದ್ದು, ಸರಿಪಡಿಸುವಂತೆ ಮನವಿ ಮಾಡಿಕೊಂಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಇದರ ಬೆನ್ನಲ್ಲೇ ದೆಹಲಿಗೆ ಆಗಮಿಸಿರುವ ಮುಖ್ಯಮಂತ್ರಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ರಣದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಖಾತೆ ಹಂಚಿಕೆಯ ಗೊಂದಲ ಬಗೆಹರಿಸುವುದು ಹಾಗೂ ಬಾಕಿ ಉಳಿದಿರುವ 20 ಸಚಿವ ಸ್ಥಾನಗಳನ್ನು ಯಾರ್ಯಾರಿಗೆ ನೀಡಬೇಕು ಎಂಬ ಪ್ರಾಥಮಿಕ ಚರ್ಚೆ ನಡೆಸಿದ್ದಾರೆ. ಹಿರಿಯ ಶಾಸಕರು, ಮಾಜಿ ಸಚಿವರು ಹಾಗೂ ಮೊದಲ ಬಾರಿಗೆ ಆಯ್ಕೆಯಾಗಿರುವ ಶಾಸಕರೂ ಕೂಡಾ ಸಚಿವ ಸ್ಥಾನ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಸಚಿವ ಸ್ಥಾನಕ್ಕಾಗಿ ವರಿಷ್ಠರ ಮೇಲೆ ಒತ್ತಡ, ಶಿಫಾರಸು ಮಾಡತೊಡಗಿದ್ದಾರೆ. ಸಚಿವಾಕಾಂಕ್ಷಿ ಶಾಸಕರು ದೆಹಲಿಗೆ ಆಗಮಿಸಿದ್ದು, ಹೈಕಮಾಂಡ್ ನಾಯಕರ ಮನವೊಲಿಕೆ ಹಾಗೂ ಒತ್ತಡ ತಂತ್ರವನ್ನು ಅನುಸರಿಸುತ್ತಿದ್ದಾರೆ. ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆ ಜೂ.18 ರಂದು ಪೂರ್ಣಗೊಳ್ಳಲಿದ್ದು, ಆನಂತರ ಸಚಿವ ಸಂಪುಟ ವಿಸ್ತರಣೆಗೆ ಮುಹೂರ್ತ ನಿಗದಿ ಮಾಡುವ ಬಗ್ಗೆಯೂ ಹೈಕಮಾಂಡ್ ಜೊತೆ ಮುಖ್ಯಮಂತ್ರಿ ಸಮಾಲೋಚನೆ ನಡೆಸಿದ್ದಾರೆ.

ಸಚಿವರಾಗಲು ಶಾಸಕರಿಂದ ನಿರಂತರ ಒತ್ತಡ ಬರುತ್ತಿರುವ ಹಿನ್ನೆಲೆಯಲ್ಲಿ ಜೂನ್ ತಿಂಗಳ ಅಂತ್ಯದೊಳಗೆ ಸಂಪುಟ ವಿಸ್ತರಣೆ ಮಾಡಲು ಮುಖ್ಯಮಂತ್ರಿ ಆಸಕ್ತಿ ತೋರಿದ್ದಾರೆ. ಬಾಕಿ ಉಳಿದಿರುವ ಎಲ್ಲಾ 20 ಸಚಿವ ಸ್ಥಾನಗಳನ್ನು ಸಚಿವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಭರ್ತಿ ಮಾಡುವ ಬಗ್ಗೆಯೂ ಹೈಕಮಾಂಡ್ ಜೊತೆ ಸಮಾಲೋಚನೆ ನಡೆಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ. ಜಾತಿವಾರು, ಪ್ರಾದೇಶಿಕತೆ, ಹಿರಿತನ ಮೊದಲಾದ ಮಾನದಂಡಗಳನ್ನು ಮುಂದಿಟ್ಟುಕೊಂಡು ಸಂಪುಟ ವಿಸ್ತರಣೆ ಮಾಡಲು ಉದ್ದೇಶಿಸಲಾಗಿದೆ. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದ ಹಲವು ಸಚಿವರನ್ನು ಕೈಬಿಟ್ಟು ಹೊಸಬರಿಗೆ ಹೆಚ್ಚು ಆದ್ಯತೆ ನೀಡುವ ಬಗ್ಗೆಯೂ ಗಂಭೀರ ಚರ್ಚೆ ನಡೆಸಿದ್ದಾರೆ.

ಸಂಪುಟ ವಿಸ್ತರಣೆ ಕುರಿತಂತೆ ಪ್ರಾಥಮಿಕ ಚರ್ಚೆ ನಡೆಸಲಾಗಿದ್ದು, ಮತ್ತೊಂದು ಸುತ್ತಿನ ಸಭೆಯ ನಂತರ ಸಂಪುಟ ಸೇರ್ಪಡೆಯಾಗುವ ಶಾಸಕರ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ. ಈಗಾಗಲೇ ಉಂಟಾಗಿರುವ ಅಸಮಾಧಾನ, ಖಾತೆ ಹಂಚಿಕೆ ಗೊಂದಲ ಮತ್ತೆ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ತಲೆದೋರುವ ಸಾಧ್ಯತೆಯಿದ್ದು, ಅದಕ್ಕೆ ಅವಕಾಶ ದೊರೆಯದಂತೆ ಎಚ್ಚರಿಕೆಯಿಂದ ಹೆಜ್ಜೆ ಇಡಲು ಹೈಕಮಾಂಡ್ ಮುಖ್ಯಮಂತ್ರಿಗೆ ಸಲಹೆ ಮಾಡಿದೆ ಎಂದು ತಿಳಿದುಬಂದಿದೆ. ಇಂದು ರಾತ್ರಿ ಹಿರಿಯ ಐಎಎಸ್ ಅಧಿಕಾರಿಗಳ ಜೊತೆ ಔತಣಕೂಟದಲ್ಲಿ ಮುಖ್ಯಮಂತ್ರಿ ಭಾಗಿಯಾಗಲಿದ್ದಾರೆ. ರಾತ್ರಿ ದೆಹಲಿಯಲ್ಲೇ ಉಳಿಯಲಿರುವ ಶಿವಕುಮಾರ್ ನಾಳೆ ಬೆಳಿಗ್ಗೆ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಿ ರಾಜ್ಯದ ಬೇಡಿಕೆಯನ್ನು ಮಂಡಿಸಲಿದ್ದಾರೆ.

ಬೆಂಗಳೂರಿಗೆ ಮರಳುವುದನ್ನು ಮುಕ್ತವಾಗಿರಿಸಿಕೊಂಡಿರುವ ಮುಖ್ಯಮಂತ್ರಿ ಖಾತೆ ಹಂಚಿಕೆ ಗೊಂದಲ ಹಾಗೂ ಸಂಪುಟ ವಿಸ್ತರಣೆ ಕುರಿತಂತೆ ಸವಿಸ್ತಾರವಾಗಿ ಹೈಕಮಾಂಡ್ ನಾಯಕರೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ನಿರ್ಧಾರದೊಂದಿಗೆ ವಾಪಸ್ ಆಗಲಿದ್ದಾರೆ ಎಂದು ಮೂಲಗಳು ಸ್ಪಷ್ಟಪಡಿಸಿವೆ. ಪರಮೇಶ್ವರ್ ದೆಹಲಿಗೆ: ಮುಖ್ಯಮಂತ್ರಿ ಆಗಮಿಸಿದ ಬೆನ್ನಲ್ಲೇ ಉಪಮುಖ್ಯಮಂತ್ರಿ ಪರಮೇಶ್ವರ್ ಕೂಡಾ ದೆಹಲಿಗೆ ಆಗಮಿಸಿದ್ದಾರೆ. ಇಂದು ಮಧ್ಯಾಹ್ನ ದೆಹಲಿಗೆ ಆಗಮಿಸಿದ ಅವರು ಕೇಂದ್ರ ಸಚಿವರನ್ನು ಭೇಟಿಯಾಗುವ ಕಾರ್ಯಕ್ರಮವಿದೆ.

## ನೋಟು ಬದಲಾವಣೆ ಇಲ್ಲ, ಪ್ಲಾಸ್ಟಿಕ್ ನೋಟು ಮಾಹಿತಿ ಸುಳ್ಳು :ಕೇಂದ್ರ ಸ್ಪಷ್ಟನೆ

ಅ.ಶ. ಸುದ್ದಿ ನವದೆಹಲಿ

ನವದೆಹಲಿ: ಮುಂದಿನ ತಿಂಗಳ ಆರಂಭದಲ್ಲಿ ಪೇಪರ್ ನೋಟುಗಳ ಬದಲಿಗೆ ಪ್ಲಾಸ್ಟಿಕ್ ನೋಟುಗಳನ್ನು ಬಳಸಲಾಗುವುದು ಎನ್ನುವ ಸುದ್ದಿಯನ್ನು ಕೇಂದ್ರ ಸರ್ಕಾರ ಅಲ್ಲಗಳೆದಿದೆ. ಯಾವುದೇ ಕಾರಣಕ್ಕೂ ನೋಟುಗಳನ್ನು ಬದಲಿಸುವುದಿಲ್ಲ ಎಂದು ಸರ್ಕಾರ ಸ್ಪಷ್ಟನೆ ನೀಡಿದೆ.



ತಡರಾತ್ರಿ ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲಾ ಕಾಗದದ ಕರೆನ್ಸಿ ನೋಟುಗಳನ್ನು ಹಿಂತೆಗೆದುಕೊಂಡು ಈ ತಿಂಗಳ ಅಂತ್ಯದ ವೇಳೆಗೆ ಅವುಗಳನ್ನು ಪ್ಲಾಸ್ಟಿಕ್ ನೋಟುಗಳೊಂದಿಗೆ ಬದಲಾಯಿ ಸುತ್ತದೆ ಎಂದು ಹೇಳುವ ಸಾಮಾಜಿಕ ಮಾಧ್ಯಮ ವರದಿಗಳು ಆಧಾರರಹಿತಿ ಎಂದು ತಿಳಿಸಲಾಗಿದೆ. ಕೇಂದ್ರ ಬ್ಯಾಂಕ್ ಅಂತಹ ಯಾವುದೇ ನಿರ್ದೇಶನ ವನ್ನು ನೀಡಿಲ್ಲ ಮತ್ತು ಅಸ್ತಿತ್ವದಲ್ಲಿರುವ ಕಾಗದದ ಕರೆನ್ಸಿ ಚಲಾವಣೆಯಲ್ಲಿ ಮುಂದುವರಿಯುತ್ತದೆ ಎಂದು ಅಧಿಕೃತ ಮೂಲಗಳು ದೃಢಪಡಿಸಿವೆ.ಪತ್ರಿಕಾ ಮಾಹಿತಿ ಬ್ಯೂರೋ ವೈರಲ್ ಸಂದೇಶಗಳನ್ನು ಸಂಪೂರ್ಣವಾಗಿ ಆಧಾರರಹಿತವೆಂದು ಅಧಿಕೃತವಾಗಿ ಫ್ಲ್ಯಾಗ್ ಮಾಡಿದೆ, ಸಾರ್ವಜನಿಕರು ಭಯಭೀತರಾಗಬಾರದು ಅಥವಾ ಪರಿಶೀಲಿಸದ ವದಂತಿಗಳನ್ನು ಹರಡಬಾರದು ಎಂದು ಒತ್ತಾಯಿಸಿದೆ. ಫ್ಯಾಕ್ಟ್ ಚೆಕ್ ನಲ್ಲಿ, ಹಲವಾರು ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು ಕಾಗದದ ಕರೆನ್ಸಿ ನೋಟುಗಳನ್ನು ಹಿಂತೆಗೆದುಕೊಂಡು ಜೂನ್ 30, 2026 ರಿಂದ ಪ್ಲಾಸ್ಟಿಕ್ ಕರೆನ್ಸಿ ನೋಟುಗಳೊಂದಿಗೆ ಬದಲಾಯಿಸುತ್ತದೆ ಎಂದು ಸುಳ್ಳು ಹೇಳುತ್ತಿವೆ ಎಂದು ಹೇಳಿದೆ.



# ಬೂದಗುಂಪ ಕ್ರಾಸ್ ವ್ಯಾಪ್ತಿಯಲ್ಲಿ ಅಕ್ರಮ ಮದ್ಯ ಮಾರಾಟ ಜಾಲ: ಅಬಕಾರಿ ಇಲಾಖೆಗೆ ಪತ್ರಕರ್ತ ಗೋವಿಂದರಾಜ್ ಬೂದಗುಂಪಾ ದೂರು

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲೆಯ ಕೊಪ್ಪಳ ತಾಲೂಕಿನ ಬೂದಗುಂಪ ಕ್ರಾಸ್ ವ್ಯಾಪ್ತಿಯಲ್ಲಿ ಪರವಾನಗಿ ಪಡೆದ ಮದ್ಯದ ಅಂಗಡಿಗಳಿಂದ ಸುತ್ತಮುತ್ತಲಿನ ವಿವಿಧ ಹಳ್ಳಿಗಳಿಗೆ ಪ್ರತಿದಿನ ಕಾನೂನುಬಾಹಿರವಾಗಿ ಮದ್ಯ ಸಾಗಾಟ ಮತ್ತು ಮಾರಾಟ ನಡೆಯುತ್ತಿದ್ದು, ತಕ್ಷಣವೇ ಇದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಅಬಕಾರಿ ಇಲಾಖೆಗೆ ಲಿಖಿತ ದೂರು ಸಲ್ಲಿಕೆಯಾಗಿದೆ. ?ಪತ್ರಕರ್ತರಾದ ಗೋವಿಂದರಾಜ್ ಬೂದಗುಂಪಾ ಅವರು ಕೊಪ್ಪಳ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಹಾಗೂ ಅಬಕಾರಿ ನಿರೀಕ್ಷಕರಿಗೆ ಜೂನ್ 10, 2026 ರಂದು ಅಧಿಕೃತವಾಗಿ ಈ ದೂರನ್ನು ಸಲ್ಲಿಸಿ, ಗ್ರಾಮೀಣ ಭಾಗದ ಜನರ ಪರವಾಗಿ ಧ್ವನಿ ಎತ್ತಿದ್ದಾರೆ.**

ಹಳ್ಳಿ ಹಳ್ಳಿಗಳಲ್ಲಿ ತಲೆಯೆತ್ತಿದ ಅಕ್ರಮ ಅಡ್ಡೆಗಳು ದೂರಿನಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ, ಬೂದಗುಂಪ ಗ್ರಾಮದ ಕ್ರಾಸ್ ಬಳಿ ಇರುವ CL-7 ಪರವಾನಗಿ ಹೊಂದಿರುವ ಮದ್ಯದ ಅಂಗಡಿಗಳೇ ಈ



ಇಡೀ ಅಕ್ರಮ ದಂಧೆಗೆ ಮೂಲ ಪ್ರೇರಣೆಯಾಗಿವೆ. ಇಲ್ಲಿಂದ ಪ್ರತಿದಿನ ನಿಯಮಗಳನ್ನು ಗಾಳಿಗೆ ತೂರಿ ಈ ಕೆಳಗಿನ ಪ್ರಮುಖ ಗ್ರಾಮಗಳಿಗೆ ಅಕ್ರಮವಾಗಿ ಮದ್ಯವನ್ನು ಸಾಗಿಸಲಾಗುತ್ತಿದೆ: ❂ ಬಿಳಿ ಬಾವಿ ❂ ಆರ್ ಎಸ್ ನಗರ ❂ ನಾಗೇಶನಹಳ್ಳಿ ❂ ಹಳಿ ಕುಮುಟ ❂ ಚಂದ್ರಗಿರಿ ❂ ಇಂದರಗಿ ❂ ಜಬಲಗುಡ್ಡ


?ಈ ಎಲ್ಲಾ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟದ ಅಡ್ಡೆಗಳು ರಾಜಾರೋಷವಾಗಿ ತಲೆಯೆತ್ತಿದ್ದು, ಇದ–ರಿಂದಾಗಿ ಹಳ್ಳಿಗಳಲ್ಲಿ ಶಾಂತಿ ಕದಡುತ್ತಿರುವುದಲ್ಲದೆ ಕಾನೂನು ಸುವ್ಯವಸ್ಥೆಗೆ ತೀವ್ರ ಧಕ್ಕೆಯುಂಟಾಗುತ್ತಿದೆ ಎಂದು ಪತ್ರಕರ್ತರು ಕಳವಳ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕರ ಪ್ರಮುಖ ಒತ್ತಾಯಗಳು



ಗ್ರಾಮೀಣ ಭಾಗದ ಜನಸಾಮಾನ್ಯರ ಹಾಗೂ ಬಡ ಕುಟುಂಬಗಳ ಹಿತದೃಷ್ಟಿಯಿಂದ ಅಬಕಾರಿ ಇಲಾಖೆಯು ತಕ್ಷಣವೇ ಕಾರ್ಯಪ್ರವೃತ್ತರಾಗಬೇಕು ಎಂದು ಒತ್ತಾಯಿಸಲಾಗಿದ್ದು, ದೂರಿನಲ್ಲಿ ಪ್ರಮುಖವಾಗಿ ಮೂರು ಬೇಡಿಕೆಗಳನ್ನು ಇಡಲಾಗಿದೆ:

**❍ ಬೂದಗುಂಪ ಕ್ರಾಸ್‌ನಲ್ಲಿರುವ ಸಂಬಂಧಪಟ್ಟ CL–7 ಮದ್ಯದ ಅಂಗಡಿಗಳ ಮಾಲೀಕರ ವಿರುದ್ಧ ತಕ್ಷಣವೇ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಬೇಕು.❍ ಮೇಲೆ ನಮೂದಿಸಿದ ಹಳ್ಳಿಗಳಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅಕ್ರಮ ಮದ್ಯದ ಅಡ್ಡೆಗಳ ಮೇಲೆ ತಕ್ಷಣ ದಾಳಿ ನಡೆಸಿ, ಪ್ರಕರಣ**


ದೂರು ಅರ್ಜಿ

ಇವರಿಗೆ,
ಅಬಕಾರಿ ಉಪ ಆಯುಕ್ತರು / ಅಬಕಾರಿ ನಿರೀಕ್ಷಕರು,
ಅಬಕಾರಿ ಇಲಾಖೆ,
ಕೊಪ್ಪಳ ಜಿಲ್ಲೆ, ಕೊಪ್ಪಳ.

ದೂರುದಾರರು:
ಗೋವಿಂದರಾಜ ಬೂದಗುಂಪ
ಬೂದಗುಂಪ ಗ್ರಾಮ, ಕೊಪ್ಪಳ ತಾಲ್ಲೂಕು.

ವಿಷಯ: ಬೂದಗುಂಪ ಕ್ರಾಸ್ ವ್ಯಾಪ್ತಿಯ CL-7 ಮದ್ಯದ ಅಂಗಡಿಗಳಿಂದ ವಿವಿಧ ಗ್ರಾಮಗಳಿಗೆ ನಡೆಯುತ್ತಿರುವ ಅಕ್ರಮ ಮದ್ಯ ಸಾಗಾಣಿಕೆ ಮತ್ತು ಮಾರಾಟದ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.

ಮಾನ್ಯರೇ,

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೂದಗುಂಪ ಗ್ರಾಮದ ಕ್ರಾಸ್ ಬಳಿ ಇರುವ CL-7 ಪರವಾನಗಿ ಹೊಂದಿರುವ ಮದ್ಯದ ಅಂಗಡಿಗಳಿಂದ ಈ ಕೆಳಗಿನ ಗ್ರಾಮಗಳಿಗೆ ಪ್ರತಿದಿನ ಅಕ್ರಮವಾಗಿ ಮದ್ಯ ಸಾಗಾಟ ಮತ್ತು ಮಾರಾಟ ನಡೆಯುತ್ತಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ:

- ಬಿಳಿ ಬಾವಿ
- ಆರ್ ಎಸ್ ನಗರ
- ನಾಗೇಶನಹಳ್ಳಿ
- ಹಳೆ ಕುಮುಟ
- ಚಂದ್ರಗಿರಿ
- ಇಂದರಗಿ
- ಜಬಲಗುಡ್ಡ

ಈ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟದ ಅಡ್ಡೆಗಳು ತಲೆಯೆತ್ತಿದ್ದು, ಬೂದಗುಂಪ ಕ್ರಾಸ್‌ನ ಅಂಗಡಿಗಳೇ ಇದಕ್ಕೆ ಮೂಲ ಪ್ರೇರಣೆಯಾಗಿವೆ. ಈ ದಂಧೆಯಿಂದಾಗಿ ಹಳ್ಳಿಗಳಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯುಂಟಾಗುತ್ತಿದೆ.
ನಮ್ಮ ಒತ್ತಾಯಗಳು:

- ಕೂಡಲೇ ಬೂದಗುಂಪ ಕ್ರಾಸ್‌ನಲ್ಲಿರುವ ಸಂಬಂಧಪಟ್ಟ CL-7 ಅಂಗಡಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.
- ಮೇಲೆ ನಮೂದಿಸಿದ ಹಳ್ಳಿಗಳಲ್ಲಿನ ಅಕ್ರಮ ಮದ್ಯ ಮಾರಾಟದ ಅಡ್ಡೆಗಳ ಮೇಲೆ ದಾಳಿ ನಡೆಸಿ, ಪ್ರಕರಣ ದಾಖಲಿಸಬೇಕು.
- ಅಕ್ರಮವಾಗಿ ಸಂಗ್ರಹಿಸಿರುವ ಮದ್ಯದ ದಾಸ್ತಾನನ್ನು ಮತ್ತು ಸಾಗಾಟಕ್ಕೆ ಬಳಸುವ ಪರಿಕರಗಳನ್ನು ಕೂಡಲೇ ಮುಟ್ಟುಗೋಲು ಹಾಕಿಕೊಳ್ಳಬೇಕು.

ಗ್ರಾಮೀಣ ಭಾಗದ ಜನಸಾಮಾನ್ಯರ ಮತ್ತು ಬಡ ಕುಟುಂಬಗಳ ಹಿತದೃಷ್ಟಿಯಿಂದ ತಾವು ಈ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ. ನೀವು ಕ್ರಮ ಕೈಗೊಳ್ಳದೆ ಹೋದರೆ ನಾವು ಫೋಟೋ ಮತ್ತು ವಿಡಿಯೋ ಪ್ರೂಫ್ ಮೂಲಕ ಲೋಕಾಯುಕ್ತರಿಗೆ ದೂರು ನೀಡಬೇಕಾಗುತ್ತದೆ.
ವಂದನೆಗಳೊಂದಿಗೆ,.

ಗೌರವಗಳೊಂದಿಗೆ......

ದಿನಾಂಕ: 10-06-2026
ಸ್ಥಳ: ಕೊಪ್ಪಳ

ಗೋವಿಂದರಾಜ ಬೂದಗುಂಪ
ಬೂದಗುಂಪ ಗ್ರಾಮ, ಕೊಪ್ಪಳ ತಾಲ್ಲೂಕು.

10-06-2026

**ದಾಖಲಿಸಬೇಕು. ❍ ಅಕ್ರಮವಾಗಿ ಸಂಗ್ರಹಿಸಿರುವ ಮದ್ಯದ ದಾಸ್ತಾನು ಹಾಗೂ ಸಾಗಾಟಕ್ಕೆ ಬಳಸುತ್ತಿರುವ ವಾಹನ ಮತ್ತು ಪರಿಕರಗಳನ್ನು ಕೂಡಲೇ ಮುಟ್ಟುಗೋಲು ಹಾಕಿಕೊಳ್ಳಬೇಕು.**

## ನೆಹರೂ ದಾಖಲೆ ಮುರಿದ ಮೋದಿಗೆ ಯುಎಸ್ ಸೆನೆಟರ್ ಕಾರ್ನಿನ್ ಅಭಿನಂದನೆ

ಅ.ಶ. ಸುದ್ದಿ ವಾಷಿಂಗ್ಟನ್

**ವಾಷಿಂಗ್ಟನ್: ಸೆನೆಟ್ ಇಂಡಿಯಾ ಕಾಕಸ್‌ನ ಸಹ–ಅಧ್ಯಕ್ಷರಾದ ಯುಎಸ್ ಸೆನೆಟರ್ ಜಾನ್ ಕಾರ್ನಿನ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಅತಿ ಹೆಚ್ಚು ಕಾಲ ಚುನಾಯಿತ ಪ್ರಧಾನಿಯಾಗಿ ಆಯ್ಕೆಯಾಗಿದ್ದಕ್ಕಾಗಿ ಅಭಿನಂದಿಸಿದ್ದಾರೆ ಮತ್ತು ಅವರ ಅಧಿಕಾರಾವಧಿಯು ಪರಿವರ್ತನೆಗೆ ಕಡಿಮೆಯಿಲ್ಲ ಎಂದು ಹೇಳಿದ್ದಾರೆ. ನರೇಂದ್ರ ಮೋದಿ ಅವರು ಭಾರತದ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಪ್ರಧಾನಿಯಾದರು, 4,399 ದಿನಗಳ ನಿರಂತರ ಅಧಿಕಾರಾವಧಿಯೊಂದಿಗೆ, ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಮೀರಿಸಿದ್ದಾರೆ.**



ಭಾರತದ ಅತಿ ಹೆಚ್ಚು ಕಾಲ ಚುನಾಯಿತ ಪ್ರಧಾನಿಯಾಗಿ ಆಯ್ಕೆಯಾದ ಪ್ರಧಾನಿ ಮೋದಿ ಅವರಿಗೆ ಅಭಿನಂದನೆಗಳು ? ಮೂರು ಪ್ರಜಾಪ್ರಭುತ್ವದ ಆದೇಶಗಳಲ್ಲಿ 1.4 ಶತಕೋಟಿ ಜನರ ನಂಬಿಕೆಯ ಮೂಲಕ ಗಳಿಸಿದ 4,399 ದಿನಗಳ ನಾಯಕತ್ವ ಎಂದು ಟೆಕ್ಸಾಸ್‌ನ ರಿಪಬ್ಲಿಕನ್ ಸೆನೆಟರ್ ಕಾರ್ನಿನ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. 250 ಮಿಲಿಯನ್ ಜನರನ್ನು ಬಡತನದಿಂದ ಮೇಲಕ್ಕೆತ್ತುವುದರಿಂದ ಹಿಡಿದು ಭಾರತವನ್ನು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯನ್ನಾಗಿ ಮಾಡುವವರೆಗೆ, ಪ್ರಧಾನಿ ಮೋದಿಯವರ ಅಧಿಕಾರಾವಧಿಯು ಪರಿವರ್ತನೆಗೆ ಕಡಿಮೆಯಿಲ್ಲ. ಯುಎಸ್–ಭಾರತ ಪಾಲುದಾ–ರಿಕೆ ಎಂದಿಗೂ ಬಲಿಷ್ಠವಾಗಿಲ್ಲ ಎಂದು ಕಾರ್ನಿನ್ ಹೇಳಿದರು. 1952 ರಲ್ಲಿ ಮೊದಲ ಬಾರಿಗೆ ಈ ಹುದ್ದೆಗೆ ಆಯ್ಕೆಯಾದ ನೆಹರು, ಮೇ 13 ರಂದು ಪ್ರಮಾಣವಚನ ಸ್ವೀಕರಿಸಿದರು ಮತ್ತು ಮೇ 27, 1964 ರವರೆಗೆ ಅಧಿಕಾರ ವಹಿಸಿಕೊಂಡರು ? 4,398 ದಿನಗಳ ಅಧಿಕಾರಾವಧಿ.1947–52 ರವರೆಗಿನ ನೆಹರು ಅವರ ಹಿಂದಿನ ಅವಧಿಯು ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿದ್ದರು ಏಕೆಂದರೆ ಚುನಾವಣೆಗಳು ಇನ್ನೂ ಸಾಂಸ್ಥಿಕೀಕರಣಗೊಂಡು ನಡೆಯಬೇಕಾಗಿತ್ತು.1966 ರಿಂದ 1984 ರವರೆಗೆ 14 ವರ್ಷಗಳ ಕಾಲ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾಗಿ ಮುರಿದ ಅಧಿಕಾರಾವಧಿಯನ್ನು ಹೊಂದಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಹೆಲ್ಮೆಟ್ ಧರಿಸಿ ಜೀವ ಉಳಿಸಿ ತಾವರಗೇರ ಠಾಣೆ ಪಿ ಎಸ್ ಐ ಅವರಿಂದ ಹೆಲ್ಮೆಟ್ ಜಾಗೃತಿ ಬೈಕ್ ಯಾ‌ರ್ಲಿ

ಅ.ಶ. ಸುದ್ದಿ ಕುಷ್ಟಗಿ

**ಕುಷ್ಟಗಿ: ತಾಲೂಕಿನ ತಾವರಗೇರ ಪೋಲೀಸ್ ಠಾಣೆಯ ಠಾಣಾಧಿಕಾರಿಯಾದ ಚಂದ್ರಪ್ಪ ಇವರ ನೇತೃತ್ವದಲ್ಲಿ ಹೆಲ್ಮೆಟ್ ಧರಿಸಿ ಜೀವ ಉಳಿಸಿ ಹೆಲ್ಮೆಟ್ ಜಾಗೃತಿ ಬೈಕ್ ಯಾರ್ಲಿ ಸಾರ್ವಜನಿಕರ ಗಮನ ಸೆಳೆಯಿತು.**

ಪ್ರತಿ ದಿನ ಹೆಚ್ಚುತ್ತಿರುವ ರಸ್ತೆ ಅಪಘಾತಗಳು ಜೀವ ಹಾನಿಗಳನ್ನು ತಡೆಯುವ ಉದ್ದೇಶದಿಂದ ಹೆಲ್ಮೆಟ್ ದ–ರಿಸುವದು ಸಾರ್ವಜನಿಕರ ಜವಬ್ದಾರಿಯಾಗಿದ್ದು ಎಂದು ಪೊಲೀಸರು ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಪಿಎಸ್‌ಐ ಚಂದ್ರಪ್ಪ ಎಚ್ ಸೇರಿದಂತೆ ಪೋಲಿಸ್ ಅಧಿಕಾರಿಗಳು



ಹಾಗೂ ಸಿಬ್ಬಂದಿಗಳು ಹೆಲ್ಮೆಟ್ ಧರಿಸಿ ಬೈಕ್ ಚಲಾಯಿಸುವ ಮೂಲಕ ಜಾಗೃತಿ ಮೂಡಿಸಿದರು. ತಾವರಗೇರ ಪೋಲಿಸ್ ಠಾಣೆಯಿಂದ ಪ್ರಾರಂಭಗೊಂಡ ಬೈಕ್ ಯಾರ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವೃತ್ತಗಳಲ್ಲಿ ಹೆಲ್ಮೆಟ್ ದರಿಸಿ ಜೀವ ಉಳಿಸಿ ಎಂಬ ಸಂದೇಶ ಜಾಗೃತಿ ಮೂಡಿಸಿ ಮಾತನಾಡಿದ ಪಿ ಎಸ್ ಐ ರವರು ಪ್ರತಿಯೊಬ್ಬ ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ದರುಸಿಯೇ ವಾಹನ ಚಲಾಯಿಸಬೇಕು ಮತ್ತು ಹಿಂಬದಿಯಲ್ಲಿ ಕುಳಿತಿರುವರು ಕೂಡ ಹೆಲ್ಮೆಟ್ ದರಿಸುವದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಹೆಲ್ಮೆಟ್ ದರಿಸುವದರಿಂದ ನಮ್ಮ ಅಮೂಲ್ಯ ಜೀವನವನ್ನು ಕಾಪಾಡಿ ಕೊಳ್ಳಬಹುದು ಎಲ್ಲರೂ ಸ್ವಯಂ ಪ್ರೇರಿತರಾಗಿ ರಸ್ತೆ ಸುರಕ್ಷತೆಗೆ ಒತ್ತು ನೀಡಬೇಕು ನಿಯಮ ಪಾಲಿಸಿ ಸುರಕ್ಷಿತವಾಗಿ ಸಂಚರಿಸಿ ಅಪಘಾತ ರಹಿತ ಸಮಾಜ ನಿರ್ಮಿಸೋಣ ಎಂದು ಹೇಳಿದರು.

# ವೃದ್ದಾಶ್ರಮಕ್ಕೆ ಅಕ್ಕಿ, ಬೆಳೆ ವಿತರಿಸಿ ಹುಟ್ಟಹಬ್ಬ ಆಚರಿಸಿಕೊಂಡ ದಸ್ತಗಿರಸಾಬ ನಿಟ್ಟಾಲಿ

## ದಾನ, ಧರ್ಮ, ಪರೋಪಕಾರ ಮನೋಭಾವನೆ ಬೆಳಸಿಕೊಳ್ಳಬೇಕು: ಮರಿಯಪ್ಪ



ಅ.ಶ. ಸುದ್ದಿ ಕುಕನೂರು

**ಕುಕನೂರು: ಪ್ರತಿಯೊಬ್ಬ ಮನುಷ್ಯನು ತನ್ನ ಜೀವಿತಾವಧಿಯಲ್ಲಿ, ದಾನ, ಧರ್ಮ ಪರೋಪಕಾರ ಗುಣಗಳನ್ನು ಬೆಳೆಸಿಕೊಂಡು ಜೀವನ ನಡೆಸಬೇಕು ಎಂದು ನಿಟ್ಟಾಲಿ ಸರಕಾರಿ ಪ್ರಾಥಮಿಕ ಶಾಲೆಯ ಎಸ್.ಡಿ.ಎಮ್. ಸಿ ಅಧ್ಯಕ್ಷ ಮರಿಯಪ್ಪ ಹನುಮಪ್ಪ ಸುಳ್ಳರ ಹೇಳಿದರು.**

ಅವರು ನಿಟ್ಟಾಲಿ ಗ್ರಾಮದ ದಸ್ತಗಿರಸಾಬ ಅಂಗಡಿಯವರ ಜನ್ಮ ದಿನಾಚರಣೆಯ ಅಂಗವಾಗಿ ಕುಕನೂರು ಪಟ್ಟಣದ ವೃದ್ದಾಶ್ರಮಕ್ಕೆ ಹಣ್ಣು, ಅಕ್ಕಿ,ಬೆಳೆ, ಉಪ್ಪಿನಕಾಯಿ ವಿತರಣೆ ಕಾರ್ಯಕ್ರಮದಲ್ಲಿ ಆಹಾರ ಪದಾರ್ಥಗಳನ್ನು ವಿತರಿಸಿ ಮಾತನಾಡಿ ಸಮಾಜದಲ್ಲಿ ಸಾಕಷ್ಟು ಶ್ರೀಮಂತರಿದ್ದರು, ಎಲ್ಲರಲ್ಲಿ ಪರೋಪಕಾರ ಮಾಡುವ ಗುಣವಿರುವುದಿಲ್ಲಾ, ಆದರೆ ನಮ್ಮ ದಸ್ತಗಿರ ಸಾಬ ಅವರು ತಮ್ಮ ಹುಟ್ಟುಹಬ್ಬದ ಅಂಗವಾಗಿ ವೃದ್ದಾಶ್ರಮಕ್ಕೆ ಆಹಾರ ಪದಾಥ–ರ್ ವಿತರಿಸುವುದಲ್ಲದೇ ತಮ್ಮ ಅಂಗಡಿಯಲ್ಲಿ ವಿದ್ಯಾರ್ಥಿಗಳ ವ್ಯಾಸಾಂಗಕ್ಕೆ ಒತ್ತು ನೀಡುವ ಮೂಲಕ ಬಡ ವಿದ್ಯಾರ್ಥಿಗಳಿಗೆ ಅತಿ ಕಡಿಮೆ ಬೆಲೆಯಲ್ಲಿ ನೋಟ್ ಬುಕ್, ಪೆನ್ನುಗಳನ್ನು ಕೊಡಲು ಮುಂದಾಗಿದ್ದು ಇವರ ಕಾರ್ಯ ಶ್ಲಾಘನೀಯವಾಗಿದ್ದು ಇವರ ಮುಂದಿನ ಜೀವನ ಸುಖವಾಗಿರಲಿ ಎಂದು ಶುಭ ಹಾರೈಸಿದರು.

ನಂತರ ದಸ್ತಗಿರ ಸಾಬ ಅಂಗಡಿ ಮಾತನಾಡಿ ನನಗೆ ಬಹಳ ದಿನಗಳಿಂದ ಸಮಾಜದಲ್ಲಿ ಏನಾದರೂ ಸೇವೆ ಮಾಡಬೇಕು ಎನ್ನುವ ಆಸೆ, ಇತ್ತು ಅಂತೆಯೇ ಇಂದು ನನ್ನ ಜನ್ಮ ದಿನವಾಗಿದ್ದು, ವೃದ್ದಾಶ್ರಮಕ್ಕೆ ಅಕ್ಕಿ, ಬೆಳೆ, ಹಣ್ಣುಗಳನ್ನು ಕೊಡುವ ಇಚ್ಚೆಯಿಂದ ಅವುಗಳನ್ನು ವಿತರಣೆ ಮಾಡಿದ್ದು ನನಗೆ ಸಂತೃಪ್ತಿ ನೀಡಿದೆ ಎಂದರು. ಮುಂದಿನ ದಿನಗಳಲ್ಲಿ ಸಮಾಜಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಮಹಾದಾಸೆ ಇದ್ದು ಭಗವಂತನ ಆಶಿರ್ವಾದದೊಂದಿಗೆ ಮುಂದೆ ಇನ್ನೂ ಹೆಚ್ಚು ಸೇವೆ ಸಲ್ಲಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ನಿಟ್ಟಾಲಿಯ ಬಸವಂತಪ್ಪ ದೊಡ್ಮನಿ, ವೃದ್ದಾಶ್ರಮದ ಮಹೇಶ ಜೋಷಿ ಹಾಗೂ ವೃದ್ದರಾದ ಶಂಕ್ರಪ್ಪ ಕುದರಿ, ನೂರಂದಪ್ಪ ಕಲ್ಯಾಣಿ, ಕೃಷ್ಣಮೂರ್ತಿ ಮುಳಗುಂದ, ರಾಮಣ್ಣ ಬಲ್ಯಾಳ, ಪಾರ್ವತಿ ಕುದರಿ, ಪದ್ಮಾವತಿ ಕಾಮತ್, ಶಿವಮ್ಮ, ಎಲ್ಲವ್ವ ದೊಡ್ಮನಿ ಸೇರಿದಂತೆ ಇತರರು ಇದ್ದರು.

# ಪ್ರಧಾನಿ ಮೋದಿ ಅವರ ದೀರ್ಘಾವಧಿ ಸೇವೆಗೆ :ಭಾಜಪ ಯಲಬುರ್ಗಾ ಮಂಡಲದ ವತಿಯಿಂದ ವಿಶೇಷ ಪೂಜೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಪ್ರಧಾನಿಯಾಗಿ ಅತಿ ಹೆಚ್ಚು ದಿನಗಳ ಕಾಲ ಸೇವೆ ಸಲ್ಲಿಸಿದ ಐತಿಹಾಸಿಕ ಮೈಲಿಗಲ್ಲನ್ನು ತಲುಪಿದ ಹಿನ್ನೆಲೆಯಲ್ಲಿ, ಯಲಬುರ್ಗಾ ಮಂಡಲದ ವತಿಯಿಂದ ಕುಕನೂರು ಪಟ್ಟಣದ ಐತಿಹಾಸಿಕ ಶ್ರೀ ಮಹಾಮಾಯಾ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಜನಕಲ್ಯಾಣಕ್ಕಾಗಿ ಪ್ರಾಥ–ರ್ನೆ ಹಮ್ಮಿಕೊಳ್ಳಲಾಗಿತ್ತು.**

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವರಾದ ಹಾಲಪ್ಪ ಆಚಾರ್ ಅವರು, ಜಾಗತಿಕ ಮಟ್ಟದಲ್ಲಿ ಪ್ರಧಾನಿ ಮೋದಿಯವರ ಸಾಧನೆಗಳು ಅಪಾರವಾಗಿವೆ, ಜಗತ್ತಿನ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ಭಾರತವನ್ನು ಮುಂಚೂಣಿಗೆ



ತಂದ ಹೆಗ್ಗಳಿಕೆ ಮೋದಿಯವರದ್ದಾಗಿದೆ. ಅವರ ನಾಯಕತ್ವದಲ್ಲಿ ದೇಶವು ಸರ್ವತೋಮುಖ ಅಭಿವೃದ್ಧಿಯತ್ತ ಹೆಜ್ಜೆ ಇಡುತ್ತಿದ್ದು, ಇಂದು ಜಗತ್ತೇ ಭಾರತದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಯುವ ಮುಖಂಡರಾದ ಮಂಜುನಾಥ ನಾಡಗೌಡರ್ ಅವರು ಮಾತನಾಡಿ, ಕಳೆದ 12 ವರ್ಷಗಳಲ್ಲಿ ಭಾರತವು ಸಾಧಿಸಿದ ಆತ್ಮನಿರ್ಭರತೆ (ಸ್ವಾವಲಂಬನೆ) ಮತ್ತು ದೇಶದ ಪ್ರಗತಿಯ ವಿವಿಧ ಆಯಾಮಗಳ ಬಗ್ಗೆ ಬೆಳಕು ಚೆಲ್ಲಿದರು. ರಕ್ಷಣೆ, ತಂತ್ರಜ್ಞಾನ ಹಾಗೂ ಮೂಲಸೌಕರ್ಯ ಸೇರಿದಂತೆ ಪ್ರತಿಯೊಂದು ವಲಯದಲ್ಲೂ ಭಾರತವು ಇಂದು ಸ್ವಾವಲಂಬಿಯಾಗುತ್ತಿದ್ದು, ಜಾಗತಿ–ಕ ಮಟ್ಟದಲ್ಲಿ ದೇಶದ ಪ್ರತಿಷ್ಠೆ ಮುಗಿಲೆತ್ತರಕ್ಕೆ ಬೆಳೆದಿದೆ ಎಂದು ಹೆಮ್ಮೆಯಿಂದ ತಿಳಿಸಿದರು. ಈ ಸಂದರ್ಭದಲ್ಲಿ ಮಂಡಲದ ಅಧ್ಯಕ್ಷ ಮಾರುತಿ ಗಾವರಾಳ, ಹಿರಿಯರಾದ ಶಿವಕುಮಾರ ನಾಗಲಾಪುರಮಠ, ಶರಣಪ್ಪ ಬಣ್ಣದಬಾವಿ, ಮುಕುಂದರಾವ್ ಕುಲಕರ್ಣಿ, ಗೋವಿಂದರಾವ್ ಕುಲಕರ್ಣಿ, ಸಿದ್ದು ಉಳಾಗಡ್ಡಿ, ಬಸವರಾಜ ಹಾಳಕೇರಿ, ಕರಬಸಯ್ಯ ಬಿನ್ನಾಳ, ಮಾರುತೇಶ ಹೂಗಾರ, ಕಳಕೇಶ ಹಟ್ಟಿಕಟಗಿ, ರಾಮನಗೌಡ ಅರಿಶಿನಬಿಡಿ, ಬಸವಣ್ಣ ಈಬೇರಿ ಸೇ–ರಿದಂತೆ ಪಕ್ಷದ ಪ್ರಮುಖರು, ಕಾರ್ಯಕರ್ತರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

# ಸಿದ್ದರಾಮಯ್ಯ ನಿರ್ಗಮನದ ನಂತರ ಬಿಜೆಪಿಯಿಂದ ಕುರುಬ ಸಮುದಾಯದ ನಾಗರಾಜ್ ಆಯ್ಕೆ :ದೇವೇಗೌಡರ 'ಸುವರ್ಣ ರಾಜಕೀಯ'ದ ಯುಗಾಂತ್ಯ!

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ನಿರ್ಗಮಿಸಿದ ನಂತರ ಅಚ್ಚ–ರಿಯ ಆಯ್ಕೆಯಲ್ಲಿ, ಬಿಜೆಪಿ ರಾಜ್ಯಸಭಾ ಚುನಾವಣೆಗೆ ತನ್ನ ಅಭ್ಯರ್ಥಿಯಾಗಿ ಕುರುಬ ಸಮುದಾಯದ ಪ್ರೊ. ಎಂ. ನಾಗರಾಜ ಅವರನ್ನು ಆಯ್ಕೆ ಮಾಡಿದೆ. ಪಿಎಚ್‌ಡಿ ಪದವಿ ಪಡೆದಿರುವ ನಾಗರಾಜ, ಕುರುಬ ಸಮುದಾಯದಿಂದ ಸಂಸತ್ತಿನಲ್ಲಿ ಏಕೈಕ ಬಿಜೆಪಿ ಸದಸ್ಯರಾಗಲಿದ್ದಾರೆ. ಹುಬ್ಬಳ್ಳಿ ಮೂಲದ ನಾಗರಾಜ ದೀರ್ಘಕಾಲದ ಆರ್‌ಎಸ್‌ಎಸ್, ಎಬಿವಿಪಿ ಸದಸ್ಯ ಮತ್ತು ಮಾಜಿ ಕೆಪಿಎಸ್‌ಸಿ ಸದಸ್ಯರಾಗಿದ್ದಾರೆ.**

ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ, ಮಾಜಿ ಸಿಎಂ ಡಿ.ವಿ. ಸದಾನಂದ ಗೌಡ ಮತ್ತು ಮಂಡ್ಯದ ಮಾಜಿ ಸಂಸದೆ ಸುಮಲತಾ ಅಂಬರೀಶ್ ಅವರ ಹೆಸರುಗಳು ಕೇಳಿಬರುತ್ತಿದ್ದ ಕಾರಣ ಅವರ ಆಯ್ಕೆ ಕೊನೆಯ ಕ್ಷಣದ ಅಚ್ಚರಿಯಾಗಿತ್ತು. ಕುರುಬ ಸಮುದಾಯದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ನಿರ್ಧಾರವು ಕುರುಬ ನಾಯಕ ಸಿದ್ದರಾಮಯ್ಯ



ಅವರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಪರಿಣಾಮವಾಗಿದೆ ಎಂದು ತೋರುತ್ತದೆ. ಪರಿಷತ್ ಚುನಾವಣೆಗೆ, ಬಿಜೆಪಿ ರಘು ಕೌಟಿಲ್ಯ (ಒಬಿಸಿ – ಮಡಿವಾಳ) ಮತ್ತು ಲಿಂಗರಾಜ್ ಪಾಟೀಲ್ (ಲಿಂಗಾಯತ) ಅವರನ್ನು ಆಯ್ಕೆ ಮಾಡಿತು. ಲಿಂಗಾಯತರಲ್ಲಿ ತನ್ನ ಪ್ರಮುಖ ಬೆಂಬಲ ನೆಲೆಯನ್ನು ಉಳಿಸಿಕೊಳ್ಳುವ ಮತ್ತು ಒಬಿಸಿಗಳಲ್ಲಿ ಬೆಂಬಲವನ್ನು ಹೆಚ್ಚಿಸುವ ತಂತ್ರದ ಭಾಗವಾಗಿ ಇಬ್ಬರು ಒಬಿಸಿ ಅಭ್ಯರ್ಥಿಗಳನ್ನು (ಒಬ್ಬ ಕುರುಬ, ಒಬ್ಬ ಮಡಿವಾಳ) ಮತ್ತು ಒಬ್ಬ ಲಿಂಗಾಯತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದಿಂದ ರಾಜ್ಯಸಭಾ ಸ್ಥಾನಕ್ಕೆ ಬಿಜೆಪಿ ಪ್ರೊಫೆಸರ್ ಎಂ. ನಾಗರಾಜ ಅವರನ್ನು ನಾಮನಿರ್ದೇಶನ ಮಾಡಿರುವುದರಿಂದ, ಜೆಡಿ–ಎಸ್ ಸರ್ವೋಚ್ಚ ನಾಯಕ ಎಚ್.ಡಿ. ದೇವೇಗೌಡರ 35 ವರ್ಷಗಳ ಸಂಸದೀಯ ಚುನಾವಣೆ ಅಂತ್ಯಗೊಳ್ಳುವ ಹಂತಕ್ಕೆ ಬರಬಹುದು ಎನ್ನಲಾಗಿದೆ. ಬಿಜೆಪಿ ಅವರನ್ನು ಬೇರೆ ರಾಜ್ಯದಿಂದ ಕಣಕ್ಕಿಳಿಸದಿದ್ದರೆ, ಜೂನ್ 30 ಕ್ಕೆ ಕೊನೆಗೊಳ್ಳುವ ಅವರ ಅವಧಿಯು ಒಂದು ಯುಗದ ಅಂತ್ಯವನ್ನು ಸೂಚಿಸಬಹುದು ಎಂದು ಹೇಳಲಾಗುತ್ತಿದೆ. ಬಿಜೆಪಿಯು ಮಿತ್ರಪಕ್ಷಗಳಿಗಿಂತ ಭಿನ್ನವಾಗಿ ಯಾವಾಗಲು ಹೊಸ ಮುಖಗಳಿಗೆ ಆದ್ಯತೆ ನೀಡುತ್ತಿದೆ ಎಂಬುದನ್ನು ಸೂಚಿಸುತ್ತದೆ. ಸುಮಲತಾ ಅಂಬರೀಶ್, ಡಿ.ವಿ. ಸದಾನಂದ ಗೌಡ ಮತ್ತು ನಿರ್ಮಲ್ ಕುಮಾರ್ ಸುರಾನ ಅವರ ಬಗ್ಗೆ ಊಹಾಪೋಹಗಳಿದ್ದರೂ, ಪಕ್ಷವು ಜೆಡಿಎಸ್ ಸ್ಥಾಪಕರನ್ನು ಬದಿಗಿಟ್ಟು, ಕಡಿಮೆ ಪ್ರೊಫೈಲ್ ಹೊಂದಿರುವ ಶಿಕ್ಷಣ ಕ್ಷೇತ್ರದ ವ್ಯಕ್ತಿಯನ್ನು ಆಯ್ಕೆ ಮಾಡಿತು.

ರಾಜ್ಯ ಬಿಜೆಪಿ ಮುಖ್ಯಸ್ಥ ಬಿ ವೈ ವಿಜಯೇಂದ್ರ ಮಾತನಾಡಿ "ದೇವೇಗೌಡರು ಮೋದಿ ಅವರ ಕೈಗಳನ್ನು ಬಲಪಡಿಸಿದ್ದಾರೆ ಮತ್ತು ಎನ್‌ಡಿಎಗೆ ಬೆಂಬಲ ನೀಡಿದ್ದಾರೆ. ಬಿಜೆಪಿ ಅವರನ್ನು ಬಹಳ ಗೌರವಿಸುತ್ತದೆ. ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ನಾಯಕರು ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ, ಬದಲಾಗಿ ರಾಷ್ಟ್ರೀಯ ನಾಯಕತ್ವ ನಿರ್ಧಾರ ತೆಗೆದುಕೊಂಡಿದೆ" ಎಂದು ಹೇಳಿದರು. ಬಿಜೆಪಿ ಆಡಳಿತವಿರುವ ಮಹಾರಾಷ್ಟ್ರದಿಂದ ಸ್ಪರ್ಧಿಸಲು ದೇವೇಗೌಡರು ನಿರಾಕರಿಸಿದ್ದಾರೆ, ಕರ್ನಾಟಕದ ಗಡಿ ಮತ್ತು ನೀರಿನ ವಿವಾದಗಳು ರಾಜ್ಯದೊಂದಿಗೆ ಹಿತಾಸಕ್ತಿ ಸಂಘರ್ಷವನ್ನು ಉಂಟುಮಾಡಬಹುದು ಮತ್ತು ಕರ್ನಾಟಕವನ್ನು ಪ್ರತಿನಿಧಿಸುವ ಅವರ ಸಾಮರ್ಥ್ಯವನ್ನು ದುರ್ಬಲಗೊಳಿಸಬಹುದು ಎಂದು ವಾದಿಸಿದರು.

# ಲೇಖಕರ ದಿನಚರಿ...

## ಮಾತಿನಲ್ಲಿ 'ಚುಚ್ಚು'ವವರ ಬಗ್ಗೆ ಎಚ್ಚರವಿರಲಿ..!

**ಪ್ರತಿಷ್ಠೆಯನ್ನು ಪಕ್ಕಕ್ಕಿಟ್ಟು ಮಾತುಕತೆಯ ಮೂಲಕ ಎಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ಆದರೆ ನಮ್ಮ ಅಹಂಕಾರದಲ್ಲಿ ಏನೇನೊ ಮಾತನಾಡಿ ಸಂಬಂಧಗಳು ರಿಪೇರಿ ಆಗಲಾರದಷ್ಟು ಹಳಿಸಿಬಿಡುತ್ತವೆ. ನಂತರ ಸಂಧಾನ ಸಾಧ್ಯವೇ ಆಗುವುದಿಲ್ಲ. ಅತಿಯಾದ ಮಾತುಗಳೇ ಅನರ್ಥಕ್ಕೆ ಕಾರಣವಾಗುತ್ತಿವೆ. ಇಂದು ಸಂಬಂಧಗಳು, ಗೆಳೆತನಗಳು ಹಾಳಾಗುವುದಕ್ಕೆ ಮುಖ್ಯ ಕಾರಣಗಳನ್ನು ಹುಡುಕಿ ಹೊರಟರೆ ಮುಖ್ಯವಾಗಿ ಗೊತ್ತಾಗುವುದು ಮಾತುಗಳಿಂದ ಮಾಡಿದ ಗಾಯಗಳು. ದೇಹಕ್ಕಾದ ಗಾಯವು ಕೆಲವೊಂದು ದಿನಕ್ಕೆ ಮಾಯಬಹುದು. ಆದರೆ ಮಾತಿನಿಂದ ಹೃದಯಕ್ಕೆ ಮಾಡಿದ ಗಾಯ ಸಾಯುವವರೆಗೆ ಇರುತ್ತದೆ. ನಾವು ಮಾತನಾಡುವಾಗ ಅಳೆದು, ತೂಗಿ ಮಾತನಾಡುವುದು ಒಳ್ಳೆಯದು.**

ಕೆಲವೊಬ್ಬರಿಗೆ ಮತ್ತೊಬ್ಬರನ್ನು ಆಡಿಕೊಳ್ಳುವುದೇ ಒಂದು ರೋಗವಾಗಿರುತ್ತದೆ. ಬೆಳಗ್ಗೆ ಎದ್ದ ತಕ್ಷಣದಿಂದಲೇ ಮತ್ತೊಬ್ಬರನ್ನು ಹೀಯಾಳಿಸುತ್ತಾ, ಮತ್ತೊಬ್ಬರ ಕಾಲೇಳೆಯುತ್ತಾ ತಾವು ಸತ್ಯಹರಿಶ್ಚಂದ್ರರಂತೆ ವರ್ತಿಸುತ್ತಾರೆ. ಇಂದು ಸಮಾಜದಲ್ಲಿ ಇಂತವರ ಸಂಖ್ಯೆ ಹೆಚ್ಚಾಗಿದೆ. ಇವರು ತಮ್ಮನ್ನು ತಾವೇ ಶ್ರೇಷ್ಠರೆಂದು, ತಾವು ಮಾಡುವ ಕೆಲಸ ಒಳ್ಳೆಯದೆಂದು ನಂಬಿರುತ್ತಾರೆ. ಇವರು ತಮ್ಮನ್ನು ಯಾವತ್ತೂ ಹೊಗಳಿಕೊಳ್ಳುತ್ತಾ ಮತ್ತೊಬ್ಬರನ್ನು ಲೇವಡಿ ಮಾಡುತ್ತಿರುತ್ತಾರೆ. ತಾವು ಸೂಪರ್ ಮ್ಯಾನ್ ಗಳಂತೆ ವರ್ತಿಸುತ್ತಾರೆ. ನಾನೇ ಹೇಳಿದ್ದೇ ಸರಿ. ನಾನು ತಿಳಿದುಕೊಂಡದ್ದೆ ಪರಮ ಸತ್ಯವೆಂಬುದು ಅವರ ವಾದ. ಇಂದು ಸಂತೃಪ್ತ ಆತ್ಮಗಳಿಗಿಂತ ಅತೃಪ್ತ ಆತ್ಮಗಳು,



ಪವಿತ್ರ ಆತ್ಮಗಳಿಗಿಂತ ಪ್ರೇತಾತ್ಮ ಆತ್ಮಗಳೆ ಹೆಚ್ಚಾಗಿವೆ. ಅತೃಪ್ತ ಆತ್ಮಗಳಿಗೆ ಯಾವುದರಲ್ಲಿಯೂ ಸಮಾಧಾನವಿಲ್ಲ. ಹಣಗಳಿಸುವ ಚಟಕ್ಕೆ ಬಿದ್ದು ಮಾನವೀಯತೆ ಮರೆತಿರುತ್ತಾರೆ.

ಮಾತಿನ ಮೇಲೆ ನಿಯಂತ್ರಣ ಇರುವುದಿಲ್ಲ. ಇವರಿಗೆ ಮಾತು ಸಾಧನವಾಗದೇ ಮಾತೇ ಸಾಧನೆಯಾಗಿರುತ್ತದೆ. ಮಾತಿನಲ್ಲಿಯೇ ಎಲ್ಲರ ಮನಸ್ಸಿಗೆ ಗಾಯ ಮಾಡುತ್ತಾ ವಿಚಿತ್ರ ಸುಖ ಅನುಭವಿಸುತ್ತಾರೆ. ತಾವೊಬ್ಬರೇ ಪ್ರಪಂಚದಲ್ಲಿ ಒಳ್ಳೆಯವರು ಎಂಬಂತೆ ವರ್ತಿಸುತ್ತಾರೆ. ಅಧಿಕಾರ, ಹಣ, ಅಂತಸ್ತುಗಳು ಮಾತಿನ ದಾಟಿಯನ್ನು ಬದಲಿಸುತ್ತವೆ. ಎಲ್ಲರೂ ಹಾಗೇಯೇ ಇರುವುದಿಲ್ಲ. ಆದರೆ ಹೆಚ್ಚಿನವರು ಹಾಗೆ ಇರುತ್ತಾರೆ. ಕೈ, ಕಾಲು, ಕಿವಿ, ಕಣ್ಣು ಎರಡೇರಡು ಕೊಟ್ಟು ಒಂದೇ ಬಾಯಿಯಿರುವ ಉದ್ದೇಶವೇ ಕಡಿಮೆ ಮಾತನಾಡಿ ಹೆಚ್ಚು ಕೆಲಸಮಾಡಿ, ಹೆಚ್ಚು ಕೇಳಿ ಎಂದು ಸೃಷ್ಟಿಕರ್ತನ ಉದ್ದೇಶವಿರಬಹುದು. ಆದರೆ ನಾವು ಕೈ, ಕಾಲು, ಕಿವಿಗಳಿಗಿಂತ ಹೆಚ್ಚಾಗಿ ಬಾಯಿಯನ್ನು ಉಪಯೋಗಿಸುತ್ತೇವೆ. ಹಾಗಂತ ಜಗತ್ತಿನಲ್ಲಿ ಕಡಿಮೆ ಮಾತನಾಡುವವರು, ಸಾಧಕರು ಇಲ್ಲವಂತಲ್ಲ ಅವರ ಸಂಖ್ಯೆ ಕಡಿಮೆಯಾಗುತ್ತಿದೆ.

ಹಾಗೇ ಜಗತ್ತಿನಲ್ಲಿ ಯಾವ ಮನುಷ್ಯನು ಪರಿಪೂರ್ಣನಲ್ಲ ಆದರೆ ಅವರೆಲ್ಲರೂ ಮಾತಿನ ಮಲ್ಲರೂ ಅಲ್ಲ. ಮೌನವಾಗಿ ತಮ್ಮ ಕೆಲಸ ಮುಗಿಸಿ ಸಾಧ್ಯವಾದರೆ ಮತ್ತೊಬ್ಬರಿಗೆ ಸಹಾಯ ಮಾಡುತ್ತಾರೆ. ಸಂತೋಷವಾಗಿರುವ ಜನರು ಎಲ್ಲರಿಗೂ ಸಂತೋಷವನ್ನು ಹಂಚಿದರೆ ಅತೃಪ್ತ ಮನಸ್ಸಿನವರು ಅಸಹನೆಯನ್ನು ಹಂಚುತ್ತಾರೆ. ತಾವು ಮಾಡಲಾಗದನ್ನು ಮತ್ತೊಬ್ಬರು ಮಾಡಿದರೆ ಕೆಲವರಲ್ಲಿ ಸಣ್ಣದಾಗಿ ಹೊಟ್ಟೆಕಿಚ್ಚು ಹುಟ್ಟಿ ಮಾತಿನಲ್ಲಿ ಪ್ರಕಟವಾಗಲು ಪ್ರಾರಂಭವಾಗುತ್ತದೆ. ಮಾತಿನಲ್ಲಿ ಚುಚ್ಚುತ್ತಾ ಅವರ ಸಾಧನೆಗೆ ಅಡ್ಡಗಾಲು ಹಾಕುತ್ತಾರೆ. "ನಿನಗಿದು ಸಾಧ್ಯವಿಲ್ಲ" ಎಂದು ಅಪಹಾಸ್ಯ ಮಾಡುತ್ತಾರೆ. ಎದುರಿನವರು ಅಳ್ಳ ಎದೆಯವರಾಗಿದ್ದರೆ ಜೀವನವನ್ನೇ ನಾಶಮಾಡಿಕೊಳ್ಳುತ್ತಾರೆ.

ಇಂದು ಎಷ್ಟೋ ಆತ್ಮಹತ್ಯೆಗಳು ಇಂತಹ ಕೆಟ್ಟ ಮಾತುಗಳಿಂದಲೇ ಆಗುತ್ತಿವೆ. ತಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿರುತ್ತದೆ. ಆದರೆ ಮತ್ತೊಬ್ಬರ ತಟ್ಟೆಯಲ್ಲಿ ನೊಣ ಹುಡುಕುತ್ತಾರೆ.

ಕೆಲವೊಂದಿಷ್ಟು ಜನಕ್ಕೆ ಹೇಗೆ ಮಾತನಾಡಬೇಕೆಂದು ಗೊತ್ತಿರದೇ ಇಲ್ಲದ ಸಮಸ್ಯೆಗಳನ್ನು ಮೈಮೇಲೆ ಎಳೆದುಕೊಳ್ಳುತ್ತಾರೆ. ಅನವಶ್ಯಕವಾದ ಮಾತುಗಳೆ ದಃಖಕ್ಕೆ ಕಾರಣವಾಗುತ್ತವೆ. ಎಲ್ಲಿ ಹೇಗೆ ಮಾತನಾಡಬೇಕೆಂಬುದೊಂದು ಕಲೆ. ಯಾರೊಂದಿಗೆ ಮಾತನಾಡುತ್ತಿದ್ದೇವೆ ಎಂಬುದನ್ನು ಅರಿತು ಮಾತನಾಡಿದರೆ ಜಗಳ, ಮನಸ್ತಾಪಗಳು ಕಡಿಮೆಯಾಗಬಹುದು. "ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬ ಗಾದೆಯಂತೆ ಅರಿತು ನುಡಿದರೆ ಕೆಲವೊಂದಿಷ್ಟು ಸಮಸ್ಯೆಗಳು ಬರದಂತೆ ನೋಡಿಕೊಳ್ಳಬಹುದು. "ನುಡಿದರೆ ಮುತ್ತಿನ ಹಾರದಂತಿ– ರಬೇಕು" ಎಂಬ ವಚನದ ಸಾಲನ್ನು ನಾವು ಮರೆಯಬಾರದು.

ನಮ್ಮ ಒಂದೊಳ್ಳೆ ಮಾತು ನೊಂದ ಜೀವಕ್ಕೆ ಸಾಂತ್ವನ, ಸಮಾಧಾನ ಕೊಡಬಹುದು. ಒಂದು ಮಾತು ಎಷ್ಟೋ ಸಾಧಕರಿಗೆ ದಾರಿದೀಪವಾಗಬಹುದು. ಬೇರೆ ಪ್ರಾಣಿಗಳಿಗಿಂತ ನಮ್ಮನ್ನು ಬೇರೆ ಮಾಡಿಸಿದ್ದೆ ಮಾತು. ಬಾಯಿಯಿದೆ ಎಂದ ಮಾತ್ರಕ್ಕೆ ಅದನ್ನು ಕೆಟ್ಟದ್ದಕ್ಕೆ ಉಪಯೋಗಿಸದೇ ಒಳ್ಳೆಯ ಮಾತುಗಳಿಂದ ನಮ್ಮ ಸುತ್ತಲಿನ ಜನರಿಗೆ ಪ್ರೀತಿ ಹಂಚಲು ಪ್ರಯತ್ನಿಸಿದರೆ ನಮಗೂ ಸಹ ಅವರಿಂದ ಅಂತಹ ಪ್ರೀತಿಯೇ ಸಿಗುತ್ತದೆ. ನಾವು ಮಾತಿನಲ್ಲಿ ದ್ವೇಷ ಕಕ್ಕಿದರೆ ಮರಳಿ ಸಿಗುವುದು ಅದೇ ದ್ವೇಷವೇ ಅಲ್ಲವೇ. ಒಮ್ಮೊಮ್ಮೆ ಜಗತ್ತಿನಲ್ಲಿ ನಿಂದಕರು ಇದ್ದಷ್ಟು ಮನುಷ್ಯ ಯೋಚಿಸಿ ಹೆಜ್ಜೆಯಿಡುತ್ತಾನೆ. ನಿಂದಕರ ನಿಂದನೆಗಳು ಒಂದು ಹಂತದವರೆಗೆ ಇದ್ದರೆ ಆರೋಗ್ಯಕರ ಸಮಾಜಕ್ಕೆ ಒಳ್ಳೆಯದು. ಆದರೆ ಅದೇ ನಿಂದಕರು ಉಂಡ ಅನ್ನ ಕರಗುವವರೆಗೆ ಮಾತಿನ ಹರಿತವಾದ ಕತ್ತಿಯಿಂದ ಚುಚ್ಚುತ್ತಿದ್ದರೆ ಸಮಾಜ ಆರೋಗ್ಯಕರವಾಗಿರಲು ಹೇಗೆ ಸಾಧ್ಯ? ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತೆಂಬ ಗಾದೆ ಇಂದಿಗೂ ಚಾಲ್ತಿಯಲ್ಲಿದೆ. ಮಾತು ಮೃತ್ಯುವಾಗದಿರಲಿ, ಮಾತು ಹಿತಮಿತವಾಗಿದ್ದರೆ ನಮ್ಮ ಆರೋಗ್ಯದ ಜೊತೆಗೆ ಸಮಾಜದ ಆರೋಗ್ಯವು ಸದೃಢವಾಗುವುದು.



ಬಸವರಾಜ ಹೊನಗೌಡರ

## ಯುದ್ಧ ಬೇಕೆ..!?



**ಎದೆಸೆಟಿಸಿ ಸೆಣಸಾಟ**
**ರೋಧನೆಯ ಕೇಳಲಿಲ್ಲವೇಕೆ**
**ಮತ ಮತೀಯ ಒಡನಾಟಕೆ**
**ಬಾಧೆಯು ಕಾಣಿಸಲಿಲ್ಲವೇಕೆ..?**

**ಮನುಜನೆಂಬ ಅಹಮಿಕೆಗೆ**
**ಒಳಮನ ಅರಿಯದೇ**
**ತಳ ಹದಿಯ ಶೋಧಿಸದೆ**
**ಮಾಯೆಯ ತಾಳಕೆ ಕುಣಿಯತಿರುವೆ**

**ಗಾಯಗೊಂಡ ರಕ್ತ ಬರೆಸಿ**
**ಕಾರ್ಮೋಡದ ಛಾಯೆಯಲಿ**
**ತಿಳಿಹಗಲ ಮರೆಮಾಚಿ**
**ರೌದ್ರ ರಾತ್ರಿಗೆ ಸಾಕ್ಷೀಕರಿಸಿದೆ.**

**ತಲ್ಲಣಗಳ ಹುಟ್ಟಿಸಿ**
**ಕಲ್ಲೆದೆಯ ಶೂಲಕೆ**
**ಮಾಲಿಕನೇ ಭಯವಿಲ್ಲದೆ**
**ಬೇಕಿತ್ತೇ ಯುದ್ಧ.**

**ಕೋಪದ ಪ್ರಲಾಪ**
**ಬೇಕೆಂಬ ಹಠ**
**ಮಣ್ಣಲಿ ಹೋಗುವುದ ತಡೆಯುವುದೇ**
**ಕಣ್ಣಾಲಿಗಳು ನರಳುವುದಕೆ ಬೇಕಿತ್ತೇ ಯುದ್ಧ.**



ರೇಷ್ಮಾ ಕಂದಕೂರ, ಸಿಂಧನೂರು.

## ಸ್ತ್ರೀ ಎಂದರೆ..?



ನಮ್ಮದು ಪುರುಷ ಪ್ರಧಾನ ಸಮಾಜ.ಈ ಸಮಾಜದಲ್ಲಿ ಮಹಿಳೆಯರು ಯಾರಿಗೂ ಕಡಿಮೆಯಿಲ್ಲ ಎನ್ನುವ ರೀತಿಯಲ್ಲಿ ಬದುಕುತ್ತಿದ್ದಾರೆ.ಆದರೂ ಆಕೆಗೆ ಕೆಲವು ಕಟ್ಟುಪಾಡುಗಳು ಬೆನ್ನು ಬಿದ್ದಿವೆ.ಅದರಂತೆಯೇ ನಡೆದುಕೊಳ್ಳಬೇಕು. ಎಷ್ಟೋ ಮನೆತನಗಳಲ್ಲಿ ಈಗಲೂ ಕೂಡ ಶತ ಶತಮಾನಗಳಿಂದ ಬಂದಂತಹ ಸ್ತ್ರೀ ಶೋಷಣೆ ನಿಂತಿಲ್ಲ. ಆಟೋ ಡ್ರೈವರ್ ನಿಂದ ಹಿಡಿದು, ಪೈಲಟ್ ವರೆಗೂ ಹೆಣ್ಣು ಸಾಧನೆ ಮಾಡಿದ್ದಾಳೆ. ವಿಜ್ಞಾನ ಕ್ಷೇತ್ರದಲ್ಲೂ ಆಕೆ ಒಳ್ಳೆಯ ಸಾಧಕಿಯಾಗಿ ತನ್ನ ಛಾಪನ್ನು ಮೂಡಿಸಿದ್ದಾಳೆ.

ಇಷ್ಟೆಲ್ಲಾ ಸಾಧನೆ ಮಾಡಿರುವ,ಅಥವಾ ಮಾಡುತ್ತಿರುವ ಆಕೆಯ ಸಾಧನೆಯ ಹಿಂದೆ ಸಾಕಷ್ಟು ದುರಂತ ಕಥೆಗಳು ಇರುತ್ತವೆ. ಸಾಧಿಸುವ ಛಲವಿರುವ ಹೆಣ್ಣಿಗೆ, ಸಾಧನೆಯ ಮಾರ್ಗ ಸುಲಭದ ಮಾತಲ್ಲ. ಕೆಲವರಿಗೆ ಕುಟುಂಬದ ಬೆಂಬಲವಿದ್ದರೆ,ಇನ್ನು ಕೆಲವರು ಎಲ್ಲಾ ಕಟ್ಟುಪಾಡುಗಳನ್ನು ದಾಟಿ ,ತನ್ನವರೆಲ್ಲರನ್ನೂ ತೊರೆದು ಬಂದಿರುತ್ತಾಳೆ. ಕಾರಣ ಆಕೆಯ ಭಾವನೆಗೆ ,ಭವಿಷ್ಯದ ಕನಸುಗಳಿಗೆ ಬೆಲೆ ಇರುವುದಿಲ್ಲ.ಅಲ್ಲಿಯೂ ಕೂಡ ಆಕೆಗೆ ಅವಮಾನ ಅಪನಿಂದೆಗಳು ತಪ್ಪುವುದಿಲ್ಲ. ಇನ್ನು ಕೆಲವು ಕಡೆ ಸ್ತ್ರೀ ಸ್ವಾತಂತ್ರ್ಯವೆನ್ನುವುದು ಸತ್ತೇ ಹೋಗಿದೆ. ಇನ್ನೂ ಒಂದು ಗುಂಪಿಗೆ ಸೇರುವ ಹೆಣ್ಣುಮಕ್ಕಳಿದ್ದಾರೆ,ಅವರ ಕಥೆಯೇ ಬೇರೆ.


ಯಾರನ್ನೂ ಎದುರಿಸುವ ಧೈರ್ಯವಿಲ್ಲದೇ, ತಮ್ಮ ಕನಸುಗಳನ್ನು ತ್ಯಾಗಮಾಡಿ, ನಾಲ್ಕುಗೋಡೆಗಳ ನಡುವೆ ಈಗಲೂ ನರಳುತ್ತಿದ್ದಾರೆ.ಅವರಿಗೆ ಜೀವನ ನುಂಗಲಾರದ ತುತ್ತಾಗಿದೆ.ಪ್ರತಿಭೆ ಅನ್ನೋದು ಕೆಲವರಿಗೆ ರಕ್ತಗತವಾಗಿ ಬಂದಿರುತ್ತದೆ. ಆದ್ರೆ ಅದನ್ನು ಗುರುತಿಸಿ ಬೆಂಬಲಿಸುವ ಮನಸ್ಸು ಮಾತ್ರ ಯಾರಿಗೂ ಇರುವುದಿಲ್ಲ. ಆಕೆಯಿಂದ ಬಯಸುವುದು ಮನೆ ಕೆಲಸವನ್ನಷ್ಟೇ.. ಮೂರು ಹೊತ್ತು ಕಸ,ಮುಸುರೆ ಮಾಡಿಕೊಂಡು, ಮಕ್ಕಳನ್ನು ನೋಡಿಕೊಂಡು ಗಂಡ ಹೇಳಿದ ಹಾಗೆ ಕೇಳ್ಕೊಂಡು ಜೀವನ ನಡೆಸುತ್ತಿದ್ದರೆ,ಆಕೆ ಒಳ್ಳೆಯವಳಾಗಿ ಇರುತ್ತಾಳೆ. ಏನಾದ್ರೂ ಒಂದು ಪ್ರತಿಭೆ ಇದ್ದು,ಒಂದು ವೇದಿಕೆ ಸಿಕ್ಕು,ಆ ಅವಕಾಶವನ್ನು ಉಪಯೋಗಿಸಿಕೊಳ್ಳುವ ಸಂದರ್ಭ ಬಂದರೆ, ಮಾತ್ರ ಆಕೆಗೆ ಮತ್ತಷ್ಟು ನೋವುಗಳು. ಹೊರಗೆ ಹೋಗಲು ಬಿಡುವುದಿಲ್ಲ. ಆಕೆಯ ಯಾವ ಪ್ರತಿಭೆಗೂ ಬೆಲೆ ಇರುವುದಿಲ್ಲ. ಒಂದು ವೇಳೆ ತನ್ನ ಕನಸನ್ನು ನನಸು ಮಾಡಿಕೊಳ್ಳುವ ನಿಟ್ಟಿನಲ್ಲಿ ಮನೆಯ ಹಿರಿಯರೊಂದಿಗೆ ಮಾತನಾಡಿದರೆ,. ಏನ್ ಮಹಾ ಟ್ಯಾಲೆಂಟ್ ನಿಂದು,ಮನೆಯಲ್ಲೇ ಬಿದ್ದಿರು, ಮನೆಯಲ್ಲಿ ಮಾಡಲು ಬೇಕಾದಷ್ಟು ಕೆಲಸಗಳಿವೆ.

ಅತಿಯಾಯ್ತು ಎಂದು ಗದರಿಸಿ, ನಿಂದಿಸಿ ನೋಯಿಸುವ ಮಹಾನುಭಾವರಿಗೇನು ಕೊರತೆಯಿಲ್ಲ... ಏನ್ ಮಾಡುವುದು ಇಂತಹ ಕೆಟ್ಟ ಸಮಾಜ ದಲ್ಲಿ ನಾವು ಬದುಕುತ್ತಿದ್ದೇವೆ.ಇನ್ನು ಕೆಲವರು ತಮ್ಮ ಸ್ವಂತ ದುಡಿಮೆಯಿಂದ ಜೀವನ ಕಟ್ಟಿಕೊಂಡರೂ ಸಹ ಅಲ್ಲಿಯೂ ಅವಳ ಚಾರಿತ್ರ್ಯ ವಧೆ ಮಾಡಿ ಅಪಹಾಸ್ಯ ಮಾಡುವವರೇ ಹೆಚ್ಚು. ಇಂತಹ ಸಂದರ್ಭದಲ್ಲಿಯೇ ನೋಡಿ ಕೆಲವು ಕಡೆ ಗಂಡ ಹೆಂಡತಿಯ ನಡುವೆ ಮನಸ್ತಾಪ,ಜಗಳಗಳು ಬರುವುದು. ಕೊನೆಗೆ ಅದು ತಲುಪುವುದು ವಿಚ್ಛೇದನದ ಕಡೆಗೆ. ಅಗ್ನಿಸಾಕ್ಷಿಯಾಗಿ ಸಪ್ತಪದಿ ತುಳಿದು, ಹಲವಾರು ಕನಸುಗಳನ್ನು ಕಂಡ ಜೀವನ ಅಲ್ಲಿಗೇ ಕೊನೆಯಾಗಿ ಮಕ್ಕಳ ಭವಿಷ್ಯಕ್ಕೂ ಮಾರಕವಾಗಿ ಬಿಡುತ್ತೆ.

ಎಷ್ಟೋ ಜನ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲೇ ವಿಧವೆಯರಾಗಿದ್ದರೂ, ತಮ್ಮ ಮಕ್ಕಳಿಗಾಗಿ ಕಷ್ಟಪಟ್ಟು ದುಡಿಯುತ್ತಿದ್ದರೆ, ಅಲ್ಲಿಯೂ ಆಕೆಗೆ ನಿಂದನೆಗಳು ತಪ್ಪಿದ್ದಲ್ಲ.ಅನೇಕ ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಾಳೆ. ಇಂತಹ ನೂರಾರು ಕಥೆಗಳು,ಉದಾಹರಣೆಗಳು ನಮ್ಮ ಕಣ್ಮುಂದೆಯೇ ಇವೆ...ಹೀಗೆಲ್ಲಾ ಆದಾಗ ನನಗೆ ಕಾಡೋ ಒಂದೇ ಪ್ರಶ್ನೆ ಅಂದ್ರೆ ಯಾಕ್ ಹೀಗೆ.? ಅಂತ.ಯಾಕೆ ,ಹೆಣ್ಣು ಮಕ್ಕಳ ಪ್ರತಿಭೆಗೆ ಬೆಲೆ ಇಲ್ವಾ..? ಅವ್ರು ಸಮಾಜದಲ್ಲಿ ಬೆಳೆಯೋದೆ ತಪ್ಪಾ...?ಹೆಸರು ಮಾಡೋದೇ ತಪ್ಪಾ...? ಕೆಲವು ಮನೆಗಳಲ್ಲಿ ನಾನು ನೋಡಿದ ಹಾಗೆ ಅಚ್ಚುಕಟ್ಟಾಗಿ ಮನೆ ನಡೆಸಿಕೊಂಡು ಹೋದ್ರೆ ಎಲ್ಲವೂ ಚೆನ್ನಾಗಿರುತ್ತೆ. ಆಕೆ ಏನಾದ್ರೂ ಮಾಡ್ಬೇಕು ಅನ್ನೋ ವಿಷಯ ಬಂದ್ರೆ ಮಾತ್ರ, ಆಕೆ ತಪ್ಪೇ ಮಾಡದೇ ಅಪರಾಧಿಯಾಗುತ್ತಾಳೆ . ಆಕೆಯ ಪ್ರತಿಭೆಯನ್ನು ತೋರಿಸಿಕೊಳ್ಳುವುದು ಮಾತ್ರ ದೊಡ್ಡ ಅಪರಾಧವೆಂಬಂತೆ ತೋರಿಸಿಕೊಳ್ಳುವ ಗಂಡಸರು ಕೂಡ ನಮ್ಮ ಸುತ್ತ ಇರುವುದು ಮಾತ್ರ ವಿಪರ್ಯಾಸ...


ಇದರಿಂದ ಮನನೊಂದು, ಗೊಂದಲಕ್ಕೀಡಾಗಿ ,ಉದ್ವೇಗ,ಕೋಪ,ಹತಾಶೆಗಳಿಗೆ ಸಿಲುಕಿ ,ಆತ್ಮಹತ್ಯೆಗೆ ಶರಣಾಗಿರುವ ಎಷ್ಟೋ ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ.ಇವತ್ತಿಗೂ ಕೂಡ ಇಂತಹ ಘಟನೆಗಳು ನಡೆಯುತ್ತಲೇ ಇವೆ. ಹೆಣ್ಣು ಮಕ್ಕಳೇ, ನಿಮಗೆ ಒಂದು ಕಿವಿಮಾತು ಎಂತಹ ಸಂದರ್ಭದಲ್ಲಿಯೂ ಕುಗ್ಗದಿರಿ,ಏನು ಬಂದರೂ ಎದುರಿಸಲು ಸಿದ್ಧರಾಗಿ..ಎಲ್ಲಿಯವರೆಗೂ ಹೆದರಿ ಬದುಕುತ್ತೇವೆಯೋ ಅಲ್ಲಿಯವರೆಗೂ ಶೋಷಣೆ ನಿಲ್ಲುವುದಿಲ್ಲ. ನಿಮ್ಮ ದಾರಿ ಸರಿಯಾದ ಮಾರ್ಗದಲ್ಲಿ ಸಾಗುತ್ತಿದ್ದರೆ,ನೀವು ಯಾರಿಗೂ ಹೆದರುವ ಅಗತ್ಯವಿಲ್ಲ.

ಇಂದು ಹೀಯಾಳಿಸಿದ ಜನ ಮುಂದೊಂದು ದಿನ ನೀನು ಸಾಧನೆ ಮಾಡಿ ನಿಂತಾಗ ನಿನ್ನ ಬೆನ್ನು ತಟ್ಟುತ್ತಾರೆ.ಎಲ್ಲಿ ಅವಮಾನ ವಾಗಿರುವುದೋ ಅಲ್ಲಿ ಸನ್ಮಾನ ಸ್ವೀಕರಿಸಿದಾಗಲೇ ನಿನ್ನ ಸಾಧನೆ ಸಾರ್ಥಕತೆ ಪಡೆಯುವುದು. ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ,ಹಿಗ್ಗದೆಯೇ ಕುಗ್ಗದೆಯೇ ನುಗ್ಗಿ ನಡೆ ಮುಂದೆ. ನಿನ್ನ ಪಯಣ ನಿಲ್ಲದಿರಲಿ ನೀ ಹೋಗುವ ದಾರಿ ಪ್ರಾಮಾಣಿಕವಾಗಿರಲಿ... ಓ ಹೆಣ್ಣೇ ನಿನಗೆ ಬೇರೆ ಹೆಸರು ಬೇಕೇ ಸ್ತ್ರೀ ಎಂದರೆ ಅಷ್ಟೇ ಸಾಕೆ..!?



ಅನುಪಮಾ ಗಾಯಿತ್ರಿ, ಬಳ್ಳಾರಿ.

## ಣಮೋ ಅರಿಹಂತಾಣಂ-ಕನ್ನಡ ಜೈನ ನೋಂಪಿ ಕಥೆಗಳು



**ಹಿಂದಿನ ಬಾಗ.....**

ಅಂಜುಬುರುಕ, ವ್ಯಾಮೋಹಿ –ಏಕೇಂದ್ರಿಯ ಜೀವ], ಕಾಪೋತಲೇಶ್ಯೆ [ದುಃಖಿ, ಆತ್ಮಪ್ರಶಂಸೆ, ಸಿಡುಕು –ನೀಚಯೋನಿಯಲ್ಲಿ ಜನ್ಮತಾಳುವುದು], ಪೀತಲೇಶ್ಯೆ [ಬುದ್ಧಿವಂತ, ದಯಾಶಾಲಿ–ಮುನುಷ್ಯಗತಿಯಲ್ಲಿ ಹುಟ್ಟುವುದು], ಪದ್ಮಲೇಶ್ಯೆ[ಉದಾರಿ, ಕ್ಷಮಾಗುಣಿ, ಧಾರ್ಮಿಕ?ದೇವಗತಿ], ಶುಕ್ಲಲೇಶ್ಯೆ [ದೋಷರಹಿತ, ಆತ್ಮಧಾನ, ನಿತ್ಯತೃಪ್ತ?ಮೀಕ್ಷಪ್ರಾಪ್ತಿ]. ಫಲಾಫಲ: ಕೋಪಿ–ಹುಲಿಯಾಗಿ, ಗರ್ವಿ–ಕತ್ತೆಯಾಗಿ, ಕಪಟಿ–ಹುಳು, ಕ್ರಿಮಿಯಾಗಿ, ಲೋಭಿ–ಸರ್ಪವಾಗಿ, ಅತಿಕಾಮಿ– ಕಪ್ಪೆ, ಪಾರಿವಾಳವಾಗಿ ಹುಟ್ಟುವನು. ಜೈನ ಕಥಾಕೋಶ: ರವಿವಾರ, ಶುಕ್ರವಾರ, ಫಲಮಂಗಳವಾರ ನೋಂಪಿಕಥೆ, ಸೂತಕ ಪರಿಹಾರ, ಸಿದ್ಧರ, ಹಿಡಿಯಕ್ಕಿಯ, ದುರ್ಗತಿ ನಿವಾರಣೆ, ದೀಪಾವಳಿ, ಭವರೋಗಾಷ್ಟಮಿ, ಜೀವದಯಾಷ್ಟಮಿ, ನಿರತಿಶಯಸುಖ, ಪಂಚಾಣು ವ್ರತದ, ದಶಲಕ್ಷಣ, ಸೌಭಾಗ್ಯದ, ಗೌರೀ, ಶ್ರೀಮದನಂತ, ಶಿವರಾತ್ರೆ, ಐದು ಕೊಳಗನ, ನಾಗರಪಂಚಮಿಯ ಹೀಗೆ ಜೈನ ಕಥಾಕೋಶವು ನೋಂಪಿಕಥೆಗಳು ಭಾಗದಿ ಒಟ್ಟು ಹತ್ತೊಂಬತ್ತು ಕಥೆಗಳನ್ನು ಒಳಗೊಂಡಿದೆ. ವಿಚಿತ್ರ ನೋಂಪಿ[ವ್ರತ]ಗಳು: ನಿಶ್ಯಂಕೆ–ಅಂಜನಾಚೋರನ ಕಥೆ: ಕಾಶ್ಮೀರ ಪ್ರಾಂತ್ಯದ ವಿಜಯಪುರ ನಗರ, ಅರಿಮಥನು ರಾಜನಾಗಿದ್ದನು. ಸೌಂದರಿಯು ಆತನ ಅರ್ಧಾಂಗಿ ಯಾಗಿದ್ದಳು, ಇವರಿಬ್ಬರ ಕಣ್ಮಣಿಯಾಗಿ ಲಲಿತಾಂಗನು ಜನಿಸಿದನು. ಪೋಲಿ ಹುಡುಗರ ಸಂಗವಮಾಡಿ ವಿಷಯಾಸಕ್ತನಾಗಿ, ಹಂದಿಗಳ ಗುಂಪಿನಲ್ಲಿ ಸೇರಿಕೊಂಡ ಹಸುವಿನ ಕರುವೂ ಹೇಲು ತಿನ್ನುವುದನ್ನು ಕಲಿಯದಿರದು ಎನ್ನುವಂತೆ ಅಡ್ಡದಾರಿಯನ್ನಿಡಿದನು.

ದೇಶಭ್ರಷ್ಟನಾದ ಲಲಿತಾಂಗನು ವಿಜಯಪುರವನ್ನು ತೊರೆದು ನೇಪಾಳ ದೇಶಕ್ಕೆ ಬಂದು ಕಳ್ಳರ ಬಳಗದಿ ಸೇರಿಕೊಂಡನು. ಅಂಜನ ಘಂಟಿಕೆಯನ್ನು ಸಿದ್ಧಿಮಾಡಿಕೊಂಡು ಅಂಜನಚೋರ, ಚೋರಶಿಖಾಮಣಿ ತಾನೆನಿಸಿ ಜೂಜುಕೋರ, ಬೇಟೆಗಾರನಾದನು. ಜಿನದತ್ತ ಶೆಟ್ಟಿಯ ಗಗನಗಾಮೀ ವಿದ್ಯೆಯು ಆತನ ಅನುಚರನಿಂದ ಈತನು ಕೈವಶಮಾಡಿಕೊಂಡನು. ಇದನ್ನು ಕಂಡು ಜಿನದತ್ತಶೆಟ್ಟಿಯು ತನಗೆ ಈ ಗಗನಗಾಮೀ ವಿದ್ಯೆ ಲಭಿಸಿದ ಬಗೆಯನ್ನು ವಿವರಿಸಿದನು. ಜಿನಪವೆಂಬ ದೇಶ, ಭುಮಿತಿಲಕ ನಗರ, ನರಪಾಲನು ರಾಜನಾಗಿದ್ದನು, ರಾಜಶ್ರೇಷ್ಠಿ ಸೌಂದರ, ಸುನಂದೆಯು ಸೆಟ್ಟಿಯ ಪತ್ನಿ ಯಾಗಿದ್ದಳು. ಈ ದಂಪತಿಗಳಿಗೆ– ಶ್ರೀವರ್ಮ, ಜಯವರ್ಮ, ಜಿನವರ್ಮ, ಜಿನದತ್ತ, ಜಿನದಾಸ ಮತ್ತು ಧನ್ವಂತರಿ ಎಂಬ ಆರು ಜನ ಮಕ್ಕಳಿದ್ದರು. ರಾಜನ ಪುರೋಹಿತ ಸೋಮಶರ್ಮ ಇವನ ಹೆಂಡತಿ ಅಗ್ಗಿಲಿ, ಇವರ ಮಗ ವಿಶ್ವಾನುಲೋಮ ಮತ್ತು ಧನ್ವಂತರಿಯೂನ ಪ್ರಾಣಕ್ಕೆ ಪ್ರಾಂ ನೀಡುವ ಸ್ನೇಹಿತರು. ಇಬ್ಬರೂ ವಿಷಯಾಸಕ್ತರಾಗಿ ತಂದೆ–ತಾಯಿಯರ ಮಾತನ್ನೂ ಕೇಳದೆ ಇವರು ಊರುಬಿಟ್ಟು ಹೊರಟು ಕಳ್ಳರ ಗುಂಪು ಸೇರಿ ಒಬ್ಬೊಬ್ಬರು ಐನೂರು ಕಳ್ಳರ ಗುಂಪಿಗೆ ನಾಯಕರಾದರು.

ಧನ್ವಂತರಿ ಮಾತ್ರ ಜಿನಾಲಯಕ್ಕೆ ಹೋಗುವುದನ್ನು ಮಾತು ತಪ್ಪಿಸಲಿಲ್ಲ, ಇಬ್ಬರೂ ಸ್ನೇಹಿತರು ಜೊತೆಗೂಡಿ ಮುನಿಗಳ ಪ್ರವಚನ ಕೇಳಿದಮೇಲೆ ವ್ರತಗಳನ್ನು ಅನುಗ್ರಹಿಸಿ ಎಂದು ಬೇಡಲು ಮುನಿಗಳು "ದಿನವೂ ಬೋಳುತಲೆ ಕಂಡ ಹೊರತು ಊಟಮಾಡಬೇಡ" ಎಂಬ ವ್ರತವನ್ನು ನೀಡಿದರು. ಈ ವ್ರತ ನೀವು ಕೇಳಿದ ಕೂಡಲೇ ಬೋಳುತಲೆ ಕುಂಬಾರನಿಗೆ ನಿಧಿಸಿಕ್ಕು, ಇವನು ಕಂಡೆ ನಾ ಕಂಡೆ ಎನ್ನಲು ವಿಷಯ ತಿಳಿದಿದೆಯೆಂದು ನಿಧಿಯ ಅರ್ಧಭಾಗವನ್ನು ನೀಡಿದನೆಂಬ ಕಥೆಯು ನೆನಪಿಗೆ ಬಂತೇ ಅದೇ ಕಥೆಯಿದು; ಮುಂದುವರೆದು ಮುನಿಗಳ ಬಳಿ ಹೋಗಿ ನಡೆದದ್ದೆಲ್ಲವನ್ನೂ ಹೇಳಿದಾಗ "ಎಷ್ಟೇ ಹಸಿವಾಗಿರಲಿ ಹೆಸರು ಗೊತ್ತಿಲ್ಲದ ಹಣ್ಣುಗಳನ್ನು ತಿನ್ನಬೇಡ" ಎಂಬ ವ್ರತವನ್ನು ದಯಪಾಲಿಸಿದರು.

ಈ ವ್ರತವನು ಹಿಡಿದ ಧನ್ವಂತರಿಯ ಮತ್ತು ಆತನ ಗೆಳೆಯ ತಮ್ಮತಮ್ಮ ಗುಂಪಿನೊಂದಿಗೆ ಸಾಗಿ ದರೋಡೆ ಮಾಡಿಕೊಂಡು ಕಾಡಿನ ದಾರಿಮಧ್ಯೆ ಆಯಾಸಗೊಂಡು, ಹಸಿವೆಯಿಂದ ಕಂಗೆಟ್ಟಾಗ ಕಾಡಿನಲ್ಲಿ ಪರಿಮಳಸೂಸುವ ರಸಭರಿತಹಣ್ಣುಗಳನ್ನು ಕಂಡು ಎಲ್ಲರೂ ತಿಂದರೂ ಇವರು ಮಾತ್ರ ವ್ರತದ ನಿಯಮದಂತೆ ಹೆಸರು ಗೊತ್ತಿರದ ಹಣ್ಣುಗಳನ್ನು ತಿನ್ನಲಿಲ್ಲ, ತಿಂದವರೆಲ್ಲರೂ ಸತ್ತರು, ಗೆಳಯರಿಬ್ಬರೂ ಒಡವೆ–ವಸ್ತ್ರ, ಧನ–ಕನಕಾದಿಗಳನ್ನೆಲ್ಲ ಸಮನಾಗಿ ಹಂಚಿಕೊಂಡು, ಮುನಿಗಳ ಬಳಿಬಂದು ನಡೆದ ವೃತ್ತಾಂತವನ್ನೆಲ್ಲ ಹೇಳಲು; "ಎಂಥಾ ಸಮಯದಲ್ಲೂ ಹಿಟ್ಟಿನಿಂದ ಮಾಡಿದ ಮಾಟದ ಎತ್ತನ್ನೂ, ಬಂಡಿಯನ್ನೂ ತಿನ್ನಬಾರದು" ಎಂಬ ವ್ರತವನ್ನು ದಯಪಾಲಿಸಿದರು. ಮತ್ತೊಂದು ಬೇರೊಂದು ನಗರಕ್ಕೆ ನುಗ್ಗಿ ಲೂಟಿಮಾಡಿಕೊಂಡು ಕಾಡಿನ ಹಾದಿಹಿಡಿದು ಬರುವಾಗ ನಾಗರಪಂಚಮಿ ದಿನ ಹುತ್ತಕ್ಕೆ ಪೂಜೆ ಸಲ್ಲಿಸಿ ಎಡೆಹಿಡಿದ ಹಿಟ್ಟಿನ ಎತ್ತನ್ನು ಬಂಡಿಯನ್ನು ಕಂಡು ಕಳ್ಳರೆಲ್ಲರೂ ತಿಂದರು ವ್ರತದ ನಿಯಮ ಪಾಲಿಸಿದ ಸ್ನೇಹಿತರು ಮಾತ್ರ ತಿನ್ನಲಿಲ್ಲ, ಹಿಟ್ಟಿನ ಎತ್ತು ಬಂಡಿಗಳ ಮೇಲೆ ನಾಗಶೇಷನು ವಿಷಕಾರಿದ್ದರಿಂದ ಎಲ್ಲರೂ ಸತ್ತುಹೋದರು,

ಇವರು ಮಾತ್ರ ಬದುಕುಳಿದು ದೋಚಿದ್ದೆಲ್ಲವನ್ನೂ ಹಂಚಿಕೊಂಡು, ಮುನಿಗಳ ಬಳಿಬಂದು ವಿಷಯ ತಿಳಸಲು "ಅಷ್ಟಮಿ ಮತ್ತು ಚತುರ್ದಶಿಯಂದು ಹೆಂಡವನ್ನೂ, ಮಾಂಸವನ್ನೂ ತಿನ್ನಬಾರದು" ಎಂಬ ವ್ರತವನ್ನು ದಯಪಾಲಿಸಿದರು. ಮಗದೊಂದು ದಿನ ಮಗದೊಂದು ಊರು, ದರೋಡೆಮಾಡಿ ನಗ–ನಾಣ್ಯಗಳನ್ನು ಹೊತ್ತಕೊಂಡು ಬಂದು ಊರ ಹೊರವಲಯದಿ ಬಿಡಾರಹೂಡಿ ಸಂಭ್ರಮಾಚರಣೆಗೆಂದು ಮಧ್ಯ ಮತ್ತು ಮಾಂಸದೂಟವನ್ನು ಸಿದ್ಧಪಡಿಸಲು ಮುಂದಾಗಿ ಎರಡೂ ಗುಂಪಿನ ಕಡೆಯವರು ಮದ್ಯ–ಮಾಂಸ ತಂದು ಬಾಡೂಟವ ಮಾಡಿ ಕುಡಿದು–ತಿಂದು–ತೇಗಿ ಅಸುನೀಗಿದರು, ದೋಚಿದ ಸಂಪತ್ತಿನ ಆಸೆಗೆಬಿದ್ದು ಎರಡೂ ಗುಂಪಿನವರು ಮಧ್ಯ ಮತ್ತು ಮಾಂಸಕ್ಕೆ ವಿಷಬೆರೆಸಿಕೊಂಡು ಬಂದಿದ್ದರು; ಅಂದು ವ್ರತದ ನಿಯಮದಂತೆ ಅಷ್ಟಮಿ ದಿನವಾದ್ದರಿಂದ ಇವರಿಬ್ಬರೂ ಗೆಳೆಯರು ಕುಡಿಯಲಿಲ್ಲ, ತಿನ್ನಲಿಲ್ಲ ಹಾಗಾಗಿ ಬದುಕುಳಿದರು,

ಸಂಪತ್ತನ್ನು ಹಂಚಿಕೊಂಡರು. ವ್ರತಗಳ ಮಹಿಮೆ ಕಂಡು ಹಿರಿಹಿರಿ ಹಿಗ್ಗಿದರು, ಮುನಿಗಳ ಬಳಿಬಂದು ವರದಿ ಒಪ್ಪಿಸಿದರು. ಆಗ ಮುನಿಗಳು "ನಿನಗೆ ಯಾವ ಪ್ರಾಣಿಯ ಮೇಲಾದರೂ ಕೋಪ ಬಂದಾಗ ಏಳು ಹೆಜ್ಜೆ ಹಿಂದಕ್ಕೆ ನಡೆದು ಅನಂತರ ನಿನಗೆ ತೋಚಿದಂತೆ ಮಾಡಬಹುದು" ಎಂಬ ವ್ರತವನ್ನು ದಯಪಾಲಿಸಿದರು. ಪರಸ್ತ್ರೀಯರ ಚಿಂತನೆಯಲ್ಲೂ, ಪರರ ಧನವನ್ನು ದೋಚುವ ಚಿಂತೆಯಲ್ಲೂ ನಮ್ಮ ಆಯಸ್ಸು ಕಳೆದುಹೋಯಿತು ಎಂದು ಮರುಗಿ, ತಮ್ಮ ಊರು ಗಜಪುರಕ್ಕೆ ಬಂದರು. ಆದಿನ ನಿತ್ಯಕರ್ಮಗಳನ್ನು ಮುಗಿಸಿ ಜಿಜಮಂದಿರಕ್ಕೆ ಬಂದು ನಡುರಾತ್ರಿಯತನಕ ಜಿನರಾತ್ರಿಯ ಪೂಜಾ ವೈಭವದಲ್ಲಿ ಮೈಮರೆತು ಮನೆಗೆ ಬಂದು ತಾನು ಮಲಗುತ್ತಿದ್ದ ಕೋಣೆಯನ್ನು ಇಣುಕಿ ನೋಡಿದನು, ಹಾಸಿಗೆಯಲ್ಲಿ ತನ್ನ ಪತ್ನಿಯೊಡನೆ ಇನ್ನೊಬ್ಬರು ಮಲಗಿರುವುದನ್ನು ಕಂಡು ಕ್ರೋಧದಿಂದ ಕುದಿದನು, ಕೂಡಲೇ ಮುನಿವಾಕ್ಯ ನೆನೆದು ಏಳು ಹೆಜ್ಜೆ ಹಿಂದಕ್ಕೆ ನಡೆದನು, ಅಷ್ಟರಲ್ಲೇ ಅತ್ತೆ, ತುಂಬ ಸೆಕೆಯಾಗುತ್ತಿದೆ, ಸ್ವಲ್ಪ ಸರಿದು ಮಲಗಿ ಎಂದು ಹೇಳಿದ್ದನ್ನು ಕೇಳಿಸಿಕೊಂಡನು, ಅದೇ ವೇಳೆಗೆ ಇವನ ತಾಯಿಯೂ ತಾನು ಹೊದ್ದಿದ್ದನ್ನು ಓರೆಮಾಡಿದಳು ಅತ್ತೆ–ಸೊಸೆ ಇಬ್ಬರನ್ನು ಕಂಡು ಧನ್ವಂತರಿಯು ಚಕಿತಗೊಂಡನು, ಮುನಿಮಹಾತ್ಮರು ನನಗೆ ಐದು ಸುವ್ರತಗಳನ್ನು ಕೊಟ್ಟರು. ಸಿಟ್ಟಿನ ಕೈಗೆ ಬುದ್ಧಿಕೊಟ್ಟಿದ್ದರೆ ಹೆತ್ತ ತಾಯಿಯನ್ನು, ಬಸುರಿ ಹೆಂಡತಿಯನ್ನು ಕೊಂದುಹಾಕಿ ದುರ್ಗತಿಗೆ ಪಕ್ಕಾಗುತ್ತಿದ್ದೆನ್ನೆಲ್ಲ! ಮೊದಲ ನಾಲ್ಕು ವ್ರತಗಳಿಗಿಂತ ಐದನೇದು ಮಹತ್ತರವಾದದ್ದು ಇಹ–ಪರದಲ್ಲೂ ಶ್ರೇಯಸ್ಸು ಪಡೆಯುವಂತಾಯ್ತು, ತಾನು ಮಹಾಪಾತಕದಿಂದ ಪಾರಾಗಿಬಂದ ಕಥನವನ್ನು ಮುನಿಗಳಬಳಿ ಹೇಳಿ, ತನ್ನದೆಲ್ಲವನ್ನೂ ತಾಯಿ ಮತ್ತು ಹೆಂಡತಿಗೆ ನೀಡಿ ವರಧರ್ಮಭಟ್ಟಾರಕ ಮುನಿಗಳ ಬಳಿ ದೀಕ್ಷೆಯನ್ನು ಪಡೆದು ಸದ್ಗತಿಯನ್ನು ಹೊಂದಿದನು. "ಅಜ್ಞಾನವೇ ಪಾಪಕರ್ಮದ ಮೂಲ; ಜ್ಞಾನವೇ ಮುಕ್ತಿಯ ಮಾರ್ಗ".

ಜೈನ ವೀರಶೈವ ಪ್ರತಿರೋಧ: ಕೂ.ಸ.ಅಪರ್ಣರವರ ನಾಗಮಂಗಲ ತಾಲ್ಲೂಕಿನ ಜೈನಶಾಸನಗಳು ಎಂಬ ಲೇಖನದ ಒಟ್ಟಂದದಿ ಉಲ್ಲೇಖಿತ ಅಂಶವು: ಈ ತಾಲ್ಲೂಕಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜೈನಶಾಸನಗಳು ಸಮೃದ್ಧವಾಗಿ ದೊರಕುತ್ತವೆಂಬ ಅಂಶವು ಸ್ಪಷ್ಟವಾಗುತ್ತದೆ. ಆನಂತರವೂ ನಾಲ್ಕು–ಐದು ಶಾಸನಗಳು ಮಾತ್ರ ದೊರಕಿದ್ದು ಇದು ಜೈನಧರ್ಮದ ಇಳಿಮುಖವನ್ನು ಸೂಚಿಸುತ್ತದೆ ಎನ್ನಬಹುದು. ಈ ದಿಸೆಯಲ್ಲಿ ನಮಗೆ ಹನ್ನೆರಡು–ಹದಿಮೂರನೇ ಶತಮಾನದ ಕಂಬದಹಳ್ಳಿ(31) ಮತ್ತು ಕಲಸಗೆರೆ(170) ಶಾಸನಗಳು ದಾರಿದೀಪಗಳಾಗಿವೆ. ಕುಲ್ಲುಣಿನಾಡ ಬಸದಿಯನ್ನು ಎಕ್ಕೋಟಿ ಜಿನಾಲಯವೆಂದು ಹೆಸರಿಸಲ್ಪಟ್ಟಿದ್ದನ್ನು ಕಲಸಗೆರೆ ಶಾಸನವು ಹೇಳಿದರೆ; ಕಂಬದಹಳ್ಳಿ ಶಾಸನವು ಎಕ್ಕೋಟಿ ಮಹಾರುದ್ರರು ಸೇರಿ ಅಲ್ಲಿನ ಬಸದಿಗೆ ಎಕ್ಕೋಟಿ ಜಿನಾಲಯವೆಂದು ಹೆಸರಿಟ್ಟು, ಪಂಚಮಹಾಶಬ್ದಗಳನ್ನು ನೀಡಿದ್ದನ್ನು ಹೇಳುತ್ತದೆ, ಅಲ್ಲದೇ ಈ ನಿಯಮವನ್ನು ಮೀರಿದವನು ಶಿವದ್ರೋಹಿ ಎಂದಿದೆ. ಈ ಕಾರಣದಿಂದ ಆ ಕಾಲದಲ್ಲಿ ವೀರಶೈವಧರ್ಮವು ಪ್ರಬಲವಾಗುತ್ತಿದ್ದು ಜೈನಧರ್ಮಕ್ಕೆ ಪ್ರತಿಸ್ಪರ್ಧಿಯಾಯಿತೆಂದೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದ ಜೈನಧರ್ಮವನ್ನು ಅದು ಪ್ರೋತ್ಸಾಹಿಸಿ ಆದರದಿಂದ ಕಂಡಿತೆಂದು ಹೇಳಬಹುದು. ಇಡೀ ಕರ್ನಾಟಕದಲ್ಲಿ ಜೈನಧರ್ಮದ ಪರಿಸ್ಥಿತಿಯು ಹೀಗೇ ಇತ್ತೆಂದು ಬೇರೆ ಹೇಳಬೇಕಾಗಿಲ್ಲ. ಜೈನಧರ್ಮದ ಇಳಿಮುಖತೆಯ ಅಂಶಗಳು: ಜೈನಧರ್ಮದ ಕಠಿಣ ಆಚರಣೆಗಳು. ಬ್ರಾಹ್ಮಣೀಯ ಪುನರುತ್ಥಾನ, ಪ್ರಾದೇಶಿಕ ಸೀಮಿತತೆ, ರಾಜಾಶ್ರಯದ ಕೊರತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ಪತ್ಯಕ್ಷ ಕಾರಣಗಳಾದರೆ; ಬೌದ್ಧ ಧರ್ಮ, ವೀರಶೈವಧರ್ಮ [ಸಂಘರ್ಷದ ಪ್ರಶ್ನೆ– ಕೆಲ ಸಾಹಿತ್ಯದಲ್ಲಿ ಜೈನ–ವೀರಶೈವ ಸಂಘರ್ಷದ ಉಲ್ಲೇಖ ಕಾಣಬಹುದು] ಪರೋಕ್ಷ ಕಾರ?ಯ–ಕಾರಣ ಅಂಶಗಳು ಎಂದು ಗುರುತಿಸಬಹುದಾಗಿದೆ.

ಮನೋಧೋರಣೆ: "ಸಾಹಿತ್ಯವನ್ನು ಅದರ ಕಾಲದ ಚೌಕಟ್ಟಿನಲ್ಲಿ ಓದಬೇಕು; ಆದರೆ ಇಂದಿನ ದೃಷ್ಟಿಯಿಂದ ಪ್ರಶ್ನಿಸುವುದು ವಿಮರ್ಶೆಯ ಕರ್ತವ್ಯ" ? ಆಧುನಿಕ ವಿಮರ್ಶಾತತ್ವ ಈ ಹಿನ್ನಲೆಯಲ್ಲಿ ಸ್ಥಿತಿ–ಕರಣ ಚತುರ ವಾರಿಷೇಣ ಕಥೆಯನ್ನು ನೋಡುವುದಾದರೆ: ಚೇಳಿನಿ ಮಹಾದೇವಿ ಈಕೆ ಮಗಧ ಸಾಮ್ರಾಟ ಶ್ರೇಣಿಕನ ಪಟ್ಟದ ರಾಣಿ ಈ ದಂಪತಿಗಳ ಪುತ್ರ ಕಡುಲೋಭಿ ವಾರಿಷೇಣ ಕಳ್ಳತನದ ಆರೋಪ, ಕೊಂದು ಹಾಕುವಂತೆ ರಾಜಾಜ್ಞೆ, ಅಲ್ಲಿಂದ ಪರಾರಿಯಾದನು ಈತನ ಮಿತ್ರ ವೈದಿಕ ಧರ್ಮಾನುಯಾಯಿ ಪುಷ್ಪದಾಡ, ಇಬ್ಬರು ಸೇರಿ ಪುಷ್ಪಗಿರಿಗೆ ಬಂದು ಸುರದೇವಾಚರ?ಯರ ಸನ್ನಿಧಿಯಲ್ಲಿ ದಿಗಂಬರ ದೀಕ್ಷೆಪಡೆದರು; ಈ ಸಂದರ್ಭದಿ ಮುನಿಗಳು ನೀಡಿದ ಉಪದೇಶವನ್ನೊಮ್ಮೆ ಕೇಳಿ: ಅರಿಷಿನದ ಕೂಳಿಗೆ ಬೀಗಿ ಬಾಯಿಬಿಟ್ಟು ವರ್ಷದ ಕೂಳನ್ನು ಕಳೆದುಕೊಳ್ಳುವ ಒಕ್ಕಲಿಗ –ನಂತೆ, ಒಂದು ಭವದ ತಪಸ್ಸಿಗೆ ಹಿಂಜರಿದು ಅನಂತಭವಗಳಲ್ಲಿ ಪಡಬಾರದ ಪಾಡನ್ನು ಪಡುತ್ತಿರುವೆ.ಹೆಣ್ಣು–ಹುಲಿಗಳಂತಿರುವ ಹೆಣ್ಣುಗಳನ್ನು ಹರಿಣಾಕ್ಷಿಯೆನ್ನುವರು. ಸೀಳುನಾಯಿ ಗಳಂತಿರುವ ಸುವಾಸಿನಿಯರನ್ನು ಲತಾ–ಲಲಿತಾಂಗಿಯೆನ್ನುವರು. ನಾರೀಮಣಿಯರನ್ನು ನಾಗವೇಣಿ ಯೆನ್ನುವರು. ಇವರು ಹೊಂಚುಹಾಕಿ ನಮ್ಮನ್ನುತಿಂದು–ತೇಗದೆ ಬಿಡರು. ನಳಿತೋಳುಗಳನ್ನು ಮಸೆದ ಮನ್ಮಥನ ಕತ್ತಿಯೆನ್ನದೆ ಬಳ್ಳಿಯೆನ್ನುವರು. ಕಾಮಿನಿಯರ ಕಡೆಗಣ್ಣ ನೋಟವನ್ನು ಕಾಮಪಾಶವೆನ್ನದೆ ನಗೆಗಣ್ಣು ಎನ್ನುತ್ತಿರುವರು. ಕಾಂತೆಯರ ಮೊಲೆಗಳನ್ನು ಮನ್ಮಥನ ಚಕ್ರಾಯುಧಗಳೆನ್ನದೆ ಚಕ್ರವಾಕವೆನ್ನುವರು. ಮಹಿಳಾಮಣಿಯರ ಮೇಲುಹೊದಿಕೆ ಯನ್ನು ಕಾಮನು ಬೀಸಿದ ಬಲೆಯೆನ್ನದೆ ಕಾಮನ ಧ್ವಜವೆನ್ನುವರು. ಸುಂದರಿಯ ಚೆಂದುಟಿಗಳನ್ನು ನರಕದ ಬಿಲವೆನ್ನದೆ ತೊಂಡೆಹಣ್ಣು ಎನ್ನುವರು. ಇದೆಲ್ಲವೂ ಬೆಣ್ಣೆಯೆಂದು ಸುಣ್ಣವನ್ನು ಮೆದ್ದಂತಲ್ಲವೆ? ನರಕದ ಹಾದಿಯನ್ನು ತಿಳಿಯದವರಿಗೆ ದಾರಿಯನ್ನು ತೋರಿಸುವುದಕ್ಕಾಗೇ ಈ ನಾರಿಯರು ಜನಿಸಿರುವರು. ಇವರು ಮೋಕ್ಷಮಾರ್ಗದಲ್ಲಿ ಹರಡಿಕೊಂಡಿರುವ ಮುಳ್ಳುಗಳು. ಇವರು ಮೋಕ್ಷಮಾರ್ಗ ಹಿಡಿದವರನ್ನು ಕಂಡು ಕಚ್ಚಲು ಬರುವ ಕಾವಲು ನಾಯಿಗಳು. ಅನಾಸಕ್ತೆ ಅನಂತಮತಿ – ನಿಷ್ಕಾಂಕೆಯ ಕಥೆ: ಅಂಗದೇಶದ ಪ್ರಿಯದತ್ತಶೆಟ್ಟಿ, ಈತನ ಮಡದಿ ಅಂಗಮತಿ, ಇವರ ಪ್ರೇಮದ ಪುತ್ರಿ ಅನಂತಮತಿ ಕಡುಚೆಲುವೆ. ಬಾಲ್ಯದಲ್ಲಿ ತಂದೆ ಆಕೆಗೆ ಮುನಿಗಳಿಂದ ಬ್ರಹ್ಮಚರ?ಯೆ ವ್ರತವನ್ನು ಕೊಡಿಸಿರುತ್ತಾನೆ, ಶ್ರದ್ಧಾಭಕ್ತಿಯಿಂದ ಪರಿಪಾಲಿಸಿಕೊಂಡು ಹೋಗುತ್ತಿರುತ್ತಾಳೆ. ಕುಂಡಲ ಮಂಡಿತ ವಿದ್ಯಾಧರನು ವಿಜಯಾರ್ಧ ಪರ್ವತದ ದಕ್ಷಿಣಶ್ರೇಣಿಯ ಕಿನ್ನರಗೀತ ನಗರದ ರಾಜ, ಈತನ ಮಡದಿ ಸುಕೇಶಿನಿ ವಾಯುವಿಹಾರಕ್ಕೆ ಹೊರಟಿರುವಾಗ, ಚಂಪಾಪುರದ ಉದ್ಯಾನವನದಿ ಅನಂತಮತಿಯನ್ನು ಕಂಡು ಮೋಹಗೊಳ್ಳುತ್ತಾನೆ. ಇತ್ತ ಅನಂತಮತಿಯ ನಿಲುವು: ದೇಹವು ಮಲದ ರಾಸಿಯಾಗಿದೆ, ರೋಗಗಳಿಗೆ ಇದು ತೌರುಮನೆಯಾಗಿದೆ, ಎಲುಬು, ರಕ್ತ, ಮಾಂಸಗಳಿಂದ ಈ ದೇಹ ರೂಪುಗೊಂಡಿದೆ. ನರಕವನ್ನು ನೆನೆದರೆ ಅಲ್ಲಿಯ ನಾನಾ ದುಃಖವನ್ನು ಜ್ಞಾಪಿಸಿಕೊಂಡರೆ ಮೈನಡುಕ ಬರುವುದು ಎಂದು ಅನಂತಮತಿ ಭವರೋಗಕ್ಕೆ ಹೆದರಿ ಜಿನಪಾದಗಳಲ್ಲಿ ಶರಣಾದಳು. ಮುಂದೆ ಶಂಕಪುರ ವಾಸಿಯಾದ ಬೇಡನ ಕಣ್ಣಿಗೆ ಬಿದ್ದು ಮೋಹಗೊಂಡು ಅಪಹರಿಸುತ್ತಾನೆ. ಅವನಿಗೆ ಒಲಿಯದೆ ಇದ್ದಾಗ ಆಕೆಯನ್ನು ಸತ್ಕರಿಸಿ ಅಯೋಧ್ಯೆಗೆ ಹೋಗಲು ಅನುವುಮಾಡಿಕೊಡುತ್ತಾನೆ. ಅಲ್ಲಿ ಬಸದಿಯೊಂದರಲ್ಲಿ ಜಿನದರ್ಶನ ಮಾಡುತ್ತಿರುವಾಗ ಪುಷ್ಪಕನೆಂಬ ವ್ಯಾಪಾರಿ ಆಕೆಯನ್ನು ಕಂಡು ಗೌರವದಿಂದ ತನ್ನ ಬಿಡಾರಕ್ಕೆ ಕರೆದುಕೊಂಡು ಹೋಗುತ್ತಾನೆ. ಆಕೆಯ ಪೂರ್ವಾಪರವನ್ನು ತಿಳಿಯಬಯಸಿದಾಗ ಆಕೆ ಹೇಳುವ ಮಾತುಗಳು ಗಮನಿಸುವಂತವುಗಳು. ಕ್ಷಮೆಯೇ ನನ್ನ ಸ್ನೇಹಿತೆ, ಶೀಲವು ನನ್ನ ಏಕೈಕಪುತ್ರ, ಸದಾಚಾರವೇ ನನ್ನ ಬಳಿ ಇರುವ ಅಕ್ಷಯ ಸಂಪತ್ತು. ವಿಶ್ವಾನುಕಂಪವೇ ನನಗೆ ತಾಯಿ. ಸತ್ಯವೇ ನನ್ನ ಮುತ್ತಾತ, ನನ್ನ ಅಣ್ಣ–ತಮ್ಮಂದಿರು ಎಂದರೆ ಸದ್ಗುಣಗಳೇ. ಈನತ್ವವೇ ನನ್ನ ಏಕೈಕ ಪುತ್ರಿ. ಸಮ್ಯಕ್ತವೇ ನನ್ನ ನಿಜವಾದ ತಂದೆ. ಸಂಯಮವೇ ನನ್ನ ಬಿಡಾರ, ಮೋಕ್ಷವೇ ನನ್ನ ದೇಶ, ಜಿನವಾಣಿಯೇ ನನ್ನ ಊರು ಎಂದು ಅಧ್ಯಾತ್ಮಿಕವಾಗಿ ಉತ್ತರಕೊಟ್ಟಳು. ಕೊನೆಮೊದಲಿಲ್ಲದ ಕೊನೆಯಲ್ಲಿ: ಕನ್ನಡ ಜೈನ ನೋಂಪಿಕಥೆ'ಗಳನ್ನು ಸಮಗ್ರವಾಗಿ ಗಮನಿಸಲಾಗಿ ಸ್ತ್ರೀಯ ಪಾಪವನ್ನು ವೈಯಕ್ತಿಕ ಸ್ವಭಾವಕ್ಕಿಂತ ಲಿಂಗಾಧಾರಿತ ದೌರ್ಬಲ್ಯವಾಗಿ ಚಿತ್ರಿಸಿರುವ ಪ್ರವೃತ್ತಿ ಇಲ್ಲಿ ಗೋಚರಿಸುತ್ತದೆ. ಮುನಿಗಳಾದ ಸುರದೇವಾಚರ?ಯರ ಹೆಣ್ಣಿನ ಕುರಿತಾದ ಉಪದೇಶ ಹಾಗೂ ಅನಾಸಕ್ತೆ ಅನಂತಮತಿಯು ಕೊಟ್ಟ ಉತ್ತರಗಳನ್ನು ಒರೆಗಚ್ಚಿ ನೋಡಲು ಯಾರ ಮತಿಯು ಸದ್ಭಾವದಿಂದ ಕೂಡಿದೆ ಎಂಬುದನ್ನು ಗ್ರಹಿಸುವವರ ಮತಿಯನ್ನವಲಂಬಿಸಿದೆ. ಇದೇ ವಿಷಯವನ್ನಿಟ್ಟುಕೊಂಡು ಮುಂದೆ ಸಂಶೋಧನಾರ್ಥಿಗಳು ವಿಸ್ತೃತ ಅಧ್ಯಯನ ಕೈಗೊಳ್ಳಲು ಮೊದಲ ಮೆಟ್ಟಿಲಾಗಬಹುದು ನನ್ನೀ ಲೇಖನವೆಂದು ಭಾವಿಸುವೆ ಇಲ್ಲವೇ ಭ್ರಮಿಸುವೆ.

–ಧನ್ಯವಾದಗಳೊಂದಿಗೆ..,



ಡಾ.ಯಲ್ಲಮ್ಮ ಕೆ.

# ಜೂ. 21 ಹರಿಪ್ರಸಾದ್ ಪದಗ್ರಹಣ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಬಿ.ಕೆ.ಹರಿಪ್ರಸಾದ್ ಅವರು ಈ ತಿಂಗಳ 21 ರಂದು ಪಕ್ಷದ ಅಧ್ಯಕ್ಷರಾಗಿ ಪದಗ್ರಹಣ ಮಾಡಲಿದ್ದಾರೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಕೆಪಿಸಿಸಿಯ ನೂತನ ಅಧ್ಯಕ್ಷ ಪದಗ್ರಹಣ ಕಾರ್ಯಕ್ರಮದಲ್ಲಿ ಕೇಂದ್ರ ಮಟ್ಟದ ಕಾಂಗ್ರೆಸ್ ನಾಯಕರು ಭಾಗಿಯಾಗಲಿದ್ದಾರೆ.**

ಅರಮನೆ ಮೈದಾನದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಂಖಡರ ಸಮ್ಮುಖದಲ್ಲಿ ಹರಿಪ್ರಸಾದ್ ಕೆಪಿಸಿಸಿ ಸಾರಥಿಯ ಜವಾಬ್ದಾರಿಯನ್ನು ವಹಿಸಿಕೊಳ್ಳುವರು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು. 2023ರಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದರು. ಈಗ ಮುಖ್ಯಮಂತ್ರಿಯಾದ ನಂತರ ಪಕ್ಷದ ಅಧ್ಯಕ್ಷತೆಯ್ನು ಬಿಟ್ಟುಕೊಟ್ಟಿದ್ದಾರೆ. ಹೈಕಮಾಂಡ್ ಹರಿಪ್ರಸಾದ್ ಅವರಿಗ ಪಕ್ಷದ ಸಾರಥ್ಯ ವಹಿಸಿದೆ. ಕಾರ್ಯಕರ್ತರೊಬ್ಬ-ರಿಗೆ ಪಕ್ಷದ ನಾಯಕತ್ವ ವಹಿಸಿರುವ ವರಿಷ್ಠರಿಗೆ ಜಿ.ಸಿ ಚಂದ್ರಶೇಖರ್ ಧನ್ಯವಾದ ಹೇಳಿದರು.

ಪಕ್ಷದಲ್ಲಿ ಯಾವುದೇ ಗಾಡ್ ಫಾದರ್‌ಗಳಿಲ್ಲದೆ ಹರಿಪ್ರಸಾದ್ ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ರಾಜ್ಯಸಭಾ ಸದಸ್ಯರಾಗಿ, ವಿಧಾನಪರಿಷತ್ ಸದಸ್ಯರಾಗಿ ಕೆಲಸ ಮಾಡಿದ್ದಾರೆ,



19 ರಾಜ್ಯಗಳಲ್ಲಿ ಕಾಂಗ್ರೆಸ್ ಉಸ್ತುವಾರಿಯಾಗಿ ಬೆಳೆದವರು ಬಹಳ ಸರಳ ನಾಯಕ ಎಂದರು ಮುಂದೆ ನಮಗೆ ಚುನಾವಣಾ ಪರ್ವ ಇದೆ. ಜಿಬಿಎ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಗಳು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಹರಿಪ್ರಸಾದ್ ಅವರ ನಾಯಕತ್ವದಲ್ಲಿ ನಾವೆಲ್ಲಾ ಚುನಾವಣೆಎ ಎದುರಿಸಿ ಪಕ್ಷವನ್ನು ಗೆಲ್ಲಿಸುವ ಕೆಲಸ ಮಾಡುತ್ತೇವೆ. 2028 ರಲ್ಲಿ ವಿಧಾನಸಭೆ ಮತ್ತು 2029ರ ಲೋಕಸಭೆ ಚುನಾವಣೆಗಳಲ್ಲಿ ಈ ಮೂವರು ನಾಯಕರ ನಾಯಕತ್ವದಲ್ಲಿ ನಾವೆಲ್ಲಾ ಚುನಾವಣೆಯನ್ನು ಗೆಲ್ಲುವ ಕೆಲಸ ಮಾಡೋಣ ಎಂದರು. ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅವರು ಪಕ್ಷದ ಕಚೇರಿಯಲ್ಲೇ ಜವಾಬ್ದಾರಿ ಹಸ್ತಾಂತರ ಕಾರ್ಯಕ್ರಮ ಮಾಡೋಣ ಎಂದು ಹೇಳಿದರು.

ಆದರೆ ಪಕ್ಷ ಅರಮನೆ ಮೈದಾನದಲ್ಲಿ ಪದಗ್ರಹಣ ಕಾರ್ಯಕ್ರಮವನ್ನು ಆಯೋಜಿಲು ತೀರ್ಮಾನಿಸಿತು ಎಂದು ಅವರು ಹೇಳಿದರು ಹರಿಪ್ರಸಾದ್ ಅವರು ಮಂತ್ರಿ ಸ್ಥಾನ ಬಿಟ್ಟು ಪಕ್ಷದ ಅಧ್ಯಕ್ಷತೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅವರಿಂದ ನಾವೆಲ್ಲಾ ಕಲಿಯಬೇಕಾಗಿರುವುದು ಬಹಳ ಇದೆ ಎಂದು ತಿಳಿಸಿದರು

ಅದ್ದೂರಿ ಸ್ವಾಗತ: ಕೆಪಿಸಿಸಿ ಅಧ್ಯಕ್ಷರಾದ ನಂತರ ಇದೇ ಮೊದಲ ಬಾರಿಗೆ ಪಕ್ಷದ ಕಚೇರಿಗೆ ಆಗಮಿಸಿದ ಹರಿಪ್ರಸಾದ್ ಅವರನ್ನು ಪಕ್ಷದ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು. ವಿಧಾನಪರಿಷತ್ ಸದಸ್ಯ ಸಲೀಂ ಅಹಮದ್, ಮಾಜಿ ಸಚಿವ ಜಮೀರ್ ಅಹಮದ್ ಖಾನ್, ಕಾರ್ಯಾಧ್ಯಕ್ಷ ಜಿ.ವಿ. ಚಂದ್ರಶೇಖರ್, ಮಂಜುನಾಥ ಭಂಡಾರಿ ಸೇರಿದಂತೆ ಹಲವು ನಾಯಕರುಗಳು ಹರಿಪ್ರಸಾದ್ ಅವರಿಗೆ ಪುಷ್ಪಗುಚ್ಛ ನೀಡಿ ಪಕ್ಷದ ಕಚೇರಿಗೆ ಬರಮಾಡಿಕೊಂಡರು.

ಪಕ್ಷದ ಕಚೇರಿಗೆ ಆಗಮಿಸಿದ ಅವರು, ಎಲ್ಲ ಮುಖಂಡರು ಹಾಗೂ ಕಾರ್ಯಕರ್ತರಿಗೆ ಧನ್ಯವಾದ ಹೇಳಿ, ಜಿಬಿಎ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ಮುಖಂಡರ ಜತೆ ಸಭೆ ನಡೆಸಿ ಚರ್ಚಿಸಿದರು. ಇಂದು ಪಕ್ಷದ ಕಚೇರಿಗೆ ಆಹ್ವಾನ ನೀಡಿದ್ದೇನೆ. ಸುದ್ದಿಗೋಷ್ಠಿಯನ್ನು ಮುಂದೆ ನಡೆಸುತ್ತನೆ. ಸದಸ್ಯ ಎಲಲ್ರಿಗ5 ಧನ್ಯವಾದ ಎಂದು ಹರಿಪ್ರಾಸದ್ ಹೇಳಿ, ಮಧ್ಯಪ್ರದೇಶದಲ್ಲಿ ಮೀನಾಕ್ಷಿನಟ-ರಾಜ್ ಅವರ ರಾಜ್ಯಸಭಾ ನಾಮಪತ್ರ ಸಲ್ಲಿಕೆ ತಿರಸ್ಕಾರವಾಗಿರುವ ಬಗ್ಗೆ ಪ್ರತಿಕ್ರಿಯಿಸಿ ಬಿಜೆಪಿಯವರು ವೋಟ್ ಚೋರಿ ಜತೆ ಸೀಟ್ ಚೋರಿಯನ್ನು ಮಾಡುತ್ತಿದ್ದಾರೆ. ಇದೆಲ್ಲಾ ನಮಗೆ ಹೊಸದಲ್ಲ ಎಲ್ಲವನ್ನು ನಾವು ಎದುರಿಸುತ್ತೆ ಎಂದು ಹೇಳಿ ಬಿಜೆಪಿ ನಡೆಯನ್ನು ಖಂಡಿಸಿದರು.

## ನೆಹರು ದಾಖಲೆ ಮುರಿದ ಪ್ರಧಾನಿ ಮೋದಿ: ರಾಜ್ಯ ಬಿಜೆಪಿ ನಾಯಕರಿಂದ ವಿಶೇಷ ಪೂಜೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನರೇಂದ್ರಮೋದಿ ಅವರು ದೇಶದಲ್ಲಿ ಸುದೀರ್ಘ ಅವಧಿಗೆ ಪ್ರಧಾನಿಯಾಗಿ ಹೊಸ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರು ರಾಜ್ಯಾದ್ಯಂತ ವಿಶೇಷ ಪೂಜೆ, ಹೋಮಹವನ ನಡೆಸಿದರು. ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ವಿ.ಸೋಮಣ್ಣ, ಪ್ರತಿಪಕ್ಷದ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮುಖಂಡರಾದ ಅಶ್ವಥ್ ನಾರಾಯಣ ಸೇರಿದಂತೆ ಪಕ್ಷದ ಮುಖಂಡರು ವಿವಿಧ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿದರು.**



ವಿಶೇಷವಾಗಿ ಹತ್ತು ವಿಧಾನಸಭಾ ಕ್ಷೇತ್ರಗಳ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿ ಇನ್ನು ಅನೇಕ ವರ್ಷಗಳ ಕಾಲ ಮೋದಿಯವರು ದೇಶ ಸೇವೆ ಮಾಡಲಿ ಎಂದು ಪ್ರಾರ್ಥಿಸಿದರು.

ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರು, ವಿಧಾನಸೌಧದಲ್ಲಿರುವ ಅರಳಿಕಟ್ಟೆ ಮುನೇಶ್ವರ ದೇವಸ್ಥಾನದಲ್ಲಿ ಮೋದಿಯವರ ಒಳಿತಿಗಾಗಿ ವಿಶೇಷ ಪೂಜೆ ಸಲ್ಲಿಸಿದರು. ಮೋದಿಯವರ ಭಾವಚಿತ್ರವನ್ನು ದೇವರ ಮುಂದೆ ಇಟ್ಟು ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಇದೇ ರೀತಿ ರಾಜ್ಯದ ನಾನಾ ಕಡೆ ಸಂಸದರು, ಶಾಸಕರು, ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ ದೀರ್ಘ ಕಾಲ ಮೋದಿಯವರು ದೇಶ ಸೇವೆ ಸಲ್ಲಿಸಲಿ ಎಂದು ಪ್ರಾರ್ಥಿಸಿದರು.

## ಸಾಧಕ ಕೃಷಿಕ ರಾಜೇಂದ್ರ ಭೋಸಲೆ ಅವರಿಗೆ 'ಜೀ ಕನ್ನಡ ನ್ಯೂಸ್ ರಿಯಲ್ ಸ್ಟಾರ್ಸ್' ಪ್ರಗತಿಪರ ರೈತ ಪ್ರಶಸ್ತಿ ಗೌರವ!




ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಕೃಷಿಯನ್ನೇ ತಪಸ್ಸಾಗಿಸಿಕೊಂಡು, ಮಣ್ಣಿನಲ್ಲಿ ಚಿನ್ನದ ಬೆಳೆ ತೆಗೆಯುವ ಮೂಲಕ ನಾಲ್ಕು ದಶಕಗಳಿಂದ ಕೃಷಿ ರಂಗದಲ್ಲಿ ಕ್ರಾಂತಿ ಮಾಡಿರುವ ಮುದ್ದೇಬಿಹಾಳದ ಖ್ಯಾತ ಉದ್ಯಮಿ ಹಾಗೂ ಆಧುನಿಕ ಕೃಷಿ ಚಿಂತಕ ರಾಜೇಂದ್ರ ಭೋಸಲೆ ಅವರಿಗೆ ಪ್ರತಿಷ್ಠಿತ 'ಜೀ ಕನ್ನಡ ನ್ಯೂಸ್ ರಿಯಲ್ ಸ್ಟಾರ್ಸ್ ಅವಾರ್ಡ್ 2026' ಪ್ರಗತಿಪರ ರೈತ ಪ್ರಶಸ್ತಿ ಒಲಿದು ಬಂದಿದೆ. ?ಇತ್ತೀಚೆಗೆ ಬೆಂಗಳೂರಿನ ಪ್ರತಿಷ್ಠಿತ 'ಲಲಿತ ಅಶೋಕ' ಹೋಟೆಲ್‌ನಲ್ಲಿ ನಡೆದ ಅತ್ಯಂತ ವೈಭವಯುತ ಸಮಾರಂಭದಲ್ಲಿ ಈ ಗೌರವವನ್ನು ಪ್ರದಾನ ಮಾಡಲಾಯಿತು.**

ಚಿತ್ರರಂಗ ಹಾಗೂ ರಾಜಕೀಯ ರಂಗದ ದಿಗ್ಗಜರ ಸಮ್ಮುಖದಲ್ಲಿ ರಾಜೇಂದ್ರ ಭೋಸಲೆ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು. ?ರಾಜೇಂದ್ರ ಸಿಂಗ್ ಬಾಬು (ಖ್ಯಾತ ಚಿತ್ರ ನಿರ್ದೇಶಕರು) ?ಮುಖ್ಯಮಂತ್ರಿ ಚಂದ್ರು (ಹಿರಿಯ ನಟರು) ?ಕುಮಾರ್ ಬಂಗಾರಪ್ಪ (ಮಾಜಿ ಸಚಿವರು) ?ಡಾ. ಜಯಮಾಲಾ (ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರು) ?ರವಿ ಎಸ್. (ಜೀ ನ್ಯೂಸ್ ಸಂಪಾದಕರು) ?ಈ ಅದ್ದೂರಿ ಸಮಾರಂಭದಲ್ಲಿ ಸ್ಯಾಂಡಲ್‌ವುಡ್ ತಾರೆಯರಾದ ನಟ ಆದಿತ್ಯ ಹಾಗೂ ನಟಿ ರೀಷ್ಮಾ ನಾಣಯ್ಯ ಉಪಸ್ಥಿತರಿದ್ದು, ಪ್ರಶಸ್ತಿ ಪುರಸ್ಕೃತರ ಸಾಧನೆಯನ್ನು ಕೊಂಡಾಡಿದರು. ?ನಾಲ್ಕು ದಶಕಗಳ ಕೃಷಿ ತಪಸ್ಸು ?"ಕೃಷಿ ಕೇವಲ ಕಾಯಕವಲ್ಲ, ಅದೊಂದು ನಿರಂತರ ನಾವೀನ್ಯತೆ" ಎಂಬುದನ್ನು ಸಾಬೀತುಪಡಿಸಿದವರು ರಾಜೇಂದ್ರ ಭೋಸಲೆ.

ಕಳೆದ 40 ವರ್ಷಗಳಿಂದ (ನಾಲ್ಕು ದಶಕಗಳು) ಕೃಷಿ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಪ್ರಯೋಗ ಹಾಗೂ ಸಾಧನೆಗಳ ಮೂಲಕ ಗುರುತಿಸಿಕೊಂಡಿರುವ ಇವರು, ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ. ?ಅವರ ಈ ಅನನ್ಯ ಸಾಧನೆಯನ್ನು ಗುರುತಿಸಿ ಜೀ ಕನ್ನಡ ನ್ಯೂಸ್ ವಾಹಿನಿಯು ಈ ರಿಯಲ್ ಸ್ಟಾರ್ ಗೌರವವನ್ನು ನೀಡಿದ್ದು, ಮುದ್ದೇಬಿಹಾಳ ತಾಲ್ಲೂಕಿನಾದ್ಯಂತ ಹಾಗೂ ಕೃಷಿ ವಲಯದಲ್ಲಿ ವ್ಯಾಪಕ ಹರ್ಷ ವ್ಯಕ್ತವಾಗಿದೆ.

## ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಿ :ನಾಗರಾಜ ನಂದಾಪೂರು

ಅ.ಶ. ಸುದ್ದಿ ಗಂಗಾವತಿ



**ಗಂಗಾವತಿ: ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಹಡಪದ ಅಪ್ಪಣ್ಣ ಸಮಾಜ ಸಂಘದ ವತಿಯಿಂದ ಪರಿಸರ ಸಂರಕ್ಷಣೆ ಮತ್ತು ಹಸಿರು ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು.**


ನಂತರ ಮಾತನಾಡಿದ ಕಾಂಗ್ರೆಸ್ ಪಕ್ಷದ ಬ್ಲಾಕ್ ಅಧ್ಯಕ್ಷ ನಾಗರಾಜ ನಂದಾಪೂರು ಯುವಕರು ಭಾಗವಹಿಸಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಮಹತ್ವವನ್ನು ಜನರಿಗೆ ತಿಳಿಸಿದರು. ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದರ ಪೋಷಣೆ ಮಾಡುವ ಮೂಲಕ ಪರಿಸರ ಸಮತೋಲನ ಕಾಪಾಡುವ ಜವಾಬ್ದಾರಿ ಹೊಂದಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಹಡಪದ ಅಪ್ಪಣ್ಣ ಸಮಾಜ ಸಂಘದ ತಾಲೂಕು ಅಧ್ಯಕ್ಷ ನಿರುಪಾದಿ ಕೆಸರಹಟ್ಟಿ, ಸಮಾಜದ ಮುಖಂಡರಾದ ಹೆಚ್. ಮಂಜುನಾಥ ಕನಕಗಿರಿ, ವಿಕ್ರಮ್ ಪಾಟೀಲ್, ಭೀಮನಗೌಡ, ವೀರಭದ್ರಪ್ಪ ಎಸ್.ಬಿ.ಮಂಜುನಾಥ ರಾಘು ಡಣಾಪೂರು, ಬಸವರಾಜ, ಕಲ್ಲೇಶ, ರವಿಕುಮಾರ್, ಚಂದ್ರಶೇಖರ ಕನಕಗಿರಿ, ನಿರಂಜನ, ಎಂ.ಶಿವಬಸವ ಪದಾಧಿಕಾರಿಗಳು, ಸದಸ್ಯರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

## ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ತಾರತಮ್ಯ ಪಾಲಕರ ಆಕ್ರೋಶ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ಪಾರದರ್ಶಕ ಆಯ್ಕೆ ನಡೆಯದ ಬಗ್ಗೆ ಅಭ್ಯರ್ಥಿ ಹಾಗೂ ಪಾಲಕರ ಆಕ್ರೋಶಕ್ಕೆ ಕಾರಣವಾಗಿದೆ. ಈ ಕುರಿತು ಪತ್ರಿಕೆ ಕಾಲೇಜಿಗೆ ಭೇಟಿ ನೀಡಿದಾಗ ಪಾಲಕರು ಪ್ರಾಚಾರ್ಯ ಈರಯ್ಯ ಕಾಡಗಿ ಅವರ ವಿರುದ್ಧ ವಾಗ್ವಾದ ನಡೆದ ಪ್ರಸಂಗ ನಡೆಯಿತು.**



ನಂತರ ಪಾಲಕ ಅಶೋಕ ಮಾಲಿಪಾಟೀಲ್ ಅವರು ನೇಮಕಾತಿ ಪ್ರಕ್ರಿಯೆ ಅನ್ನು ಪ್ರಾಚಾರ್ಯರು ನಿಯಮ ಉಲ್ಲಂಘಿಸಿ ಮೆ-ರಿಟ್ ಪ್ರತಿಭೆಗಳನ್ನು ಕಡೆಗಣಿಸಿದ್ದಾರೆ ಎಂದು ಆರೋಪಿಸಿದರು. ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿ ನೋಟಿಸ್ ಹಚ್ಚಿಲ್ಲ, ಪ್ರಕಟಣೆ ಹೊರಡಿಸಿಲ್ಲ ಎಲ್ಲರಿಗೂ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತಿ-ದ್ದಾರೆ ಮೇಲಾಧಿಕಾರಿಗಳು ಪ್ರಚಾರ್ಯ ಮೇಲೆ ಕ್ರಮಕ್ಕೆ ಒತ್ತಾಯಿಸಿದರು.


ಈ ಕುರಿತು ಪಿಯುಸಿ ಉಪನಿರ್ದೆಶಕರಾದ ಜಗದೀಶ ಅವರನ್ನು ಪತ್ರಿಕೆ ಸಂಪರ್ಕಿಸಿದಾಗ ತಾರತಮ್ಯದ ಕುರಿತು ತಮಗೆ ಮಾಹಿತಿ ಇಲ್ಲ. ತಾವು ಬೆಂಗಳೂರಿಗೆ ಬಂದಿದ್ದು ಬಂದ ಕೂಡಲೇ ಯಾರಿಗೂ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರತಿಕ್ರಿಯಿಸಿದರು.

# ಅಫ್ಘಾನ್ ವಿರುದ್ಧದ ಏಕದಿನ ತಂಡದಿಂದ ಹೊರಬಿದ್ದ ಹಾರ್ದಿಕ್ ಪಾಂಡ್ಯಾ

ಅ.ಶ. ಸುದ್ದಿ ಮುಂಬೈ

**ಮುಂಬೈ: ಅಫ್ಘಾನಿಸ್ತಾನದ ವಿರುದ್ಧದ ಏಕದಿನ ಸರಣಿಯಿಂದ ಹಾರ್ದಿಕ್ ಪಾಂಡ್ಯಗೆ ಕೊಕ್ ನೀಡಲಾಗಿದೆ.ಭಾರತ ಮತ್ತು ಅಫ್ಘಾನಿಸ್ತಾನ ನಡುವಿನ ಮುಂಬರುವ ಏಕದಿನ ಸರಣಿಗೆ ಹಾರ್ದಿಕ್ ಪಾಂಡ್ಯ ಫಿಟ್ ಎಂದು ಘೋಷಿಸಿದ ಒಂದು ದಿನದ ನಂತರ, ಹೊಸ ಗಾಯದಿಂದಾಗಿ ಅವರನ್ನು ಹೊರಗಿಡಲಾಗಿದೆ.**

ಹಾರ್ದಿಕ್ ಕ್ವಾಡ್ರೈಸ್ಪ್ ಎಂಬ ಗಾಯದಿಂದ ಬಳಲುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ, ಇದೇ ಜೂ. 13 ರಿಂದ ಪ್ರಾರಂಭವಾಗುವ ಅಫ್ಘಾನಿಸ್ತಾನ ವಿರುದ್ಧದ ಮೂರು ಏಕದಿನ ಪಂದ್ಯಗಳಲ್ಲಿ ಭಾಗವಹಿಸುವುದಕ್ಕೆ ಅವರ ಗಾಯ ಅಡ್ಡಿಪಡಿಸಿದೆ. ಹಾರ್ದಿಕ್ ಮತ್ತು ರೋಹಿತ್ ಶರ್ಮಾ ಇಬ್ಬರೂ ಬೆಂಗಳೂರಿನ ಬಿಸಿಸಿಐ ಸೆಂಟ-ರ್ ಆಫ್ ಎಕ್ಸಲೆನ್ಸ್ ನಲ್ಲಿ ತಮ್ಮ ಫಿಟ್ನೆಸ್ ಅನ್ನು ಸಾಬೀತುಪಡಿಸಿದ್ದಾರೆ ಮತ್ತು ಅಫ್ಘಾನಿಸ್ತಾನ



ವಿರುದ್ಧದ ಮೂರು ಏಕದಿನ ಪಂದ್ಯಗಳಿಗೆ ಲಭ್ಯವಿರುತ್ತಾರೆ ಎಂದು ನಿನ್ನೆ ದೃಢಪಡಿಸಲಾಯಿತು. ಹಾರ್ದಿಕ್ ಜೂನ್ 11 ರಂದು ಧರ್ಮಶಾಲಾದಲ್ಲಿ ಭಾರತೀಯ ತಂಡದ ಇತರ ಸದಸ್ಯರೊಂದಿಗೆ ಸಂಪರ್ಕ ಸಾಧಿಸಬೇಕಿತ್ತು, ಆದರೆ ಅದೃಷ್ಟವು ತಿರುವು ಮುರುವು ಮಾಡಿತ್ತು.ಹಾರ್ದಿಕ್ ಮುಂಬೈ ಇಂಡಿಯನ್‌ಸ ಪರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2026 ರ ಋತುವಿನಲ್ಲಿ ಗಾಯದಿಂದಾಗಿ ಗೈರುಹಾಜರಾಗಿದ್ದರು.

ಹಾರ್ದಿಕ್ ಒಂದು ವರ್ಷಕ್ಕೂ ಹೆಚ್ಚು ಕಾಲ ಭಾರತ ಪರ ಏಕದಿನ ಪಂದ್ಯವೊಂದರಲ್ಲಿ ಕಾಣಿಸಿಕೊಳ್ಳಲು ಸಿದ್ಧರಾಗಿದ್ದರು, ಆದ-'ರೆ ಬಿಸಿಸಿಐ ಆಯ್ಕೆ ಸಮಿತಿಯು ಈಗ ಹನ್ನೊಂದನೇ ಗಂಟೆಯಲ್ಲಿ ಅವರ ಬದಲಿ ಆಟಗಾರನನ್ನು ಹೆಸರಿಸಲು ಒತ್ತಾಯಿಸಲ್ಪಟ್ಟಿದೆ. ಭಾರತದ ವೈಟ್-ಬಾಲ್ ಸೆಟಪ್‌ನಲ್ಲಿ ಪಾಂಡ್ಯ ಪ್ರಮುಖ ಆಟಗಾರ. ಅವರು ತಮ್ಮ ವೇಗದ ಬೌಲಿಂಗ್ ಮತ್ತು ಡೆತ್ ಓವರ್‌ಗಳಲ್ಲಿ ಆಕರ್ಷಕ ಹೊಡೆತಗಳಿಂದ ತಂಡಕ್ಕೆ ನೀಡುವ ಸಮತೋಲನವನ್ನು ಗಮನಿಸಿದರೆ. ಅವರು ತರಬೇತಿ ಅವಧಿಯಲ್ಲಿ 10 ಓವರ್‌ಗಳನ್ನು ಬೌಲಿಂಗ್ ಮಾಡಿ, 50 ಓವರ್‌ಗಳ ಕ್ರಿಕೆಟ್‌ನ ಕಠಿಣತೆಗೆ ಸಿದ್ಧ-ರಿದ್ದಾರೆ ಎಂದು ಸಾಬೀತುಪಡಿಸಿದರು. ಆದ-ಾಗ್ಯೂ, ಈಗ ಅವರಿಗೆ ಮತ್ತೊಂದು ಗಾಯವಾಗಿದೆ. ಮಾಜಿ ನಾಯಕ ರೋಹಿತ್ ಕೂಡ ತಮ್ಮ ಮಂಡಿರಜ್ಜು ನೋವನ್ನು ನಿರ್ಣಯಿಸಲು ಸಿಒಇಯಲ್ಲಿದ್ದರು,

ಮತ್ತು ಪರೀಕ್ಷೆಯ ನಂತರ ಅವ-ರಿಗೂ ಸಹ ಅನುಮತಿ ನೀಡಲಾಗಿದೆ. ಮಂಡಿರಜ್ಜು ನೋವಿನಿಂದಾಗಿ ಸ್ಟಾರ್ ಬ್ಯಾಟ್?ಸಮನ್ ವಿರಾಟ್ ಕೊಹ್ಲಿ ಈಗಾಗಲೇ ಸರಣಿಯಿಂದ ಹೊರಗುಳಿದಿದ್ದಾರೆ. ಧರ್ಮಶಾಲಾವನ್ನು ಹೊರತುಪಡಿಸಿ, ಜೂನ್ 17 ಮತ್ತು ಜೂನ್ 20 ರಂದು ಲಕ್ನೋ ಮತ್ತು ಚೆನ್ನೈನಲ್ಲಿ ಪಂದ್ಯಗಳನ್ನು ಒಳಗೊಂಡಿದೆ. ಗೌತಮ್ ಗಂಭೀರ್ ನೇತೃತ್ವದ ತಂಡದ ಆಡಳಿತ ಮಂಡಳಿಯು 2027 ರ ವಿಶ್ವಕಪ್ ಅನ್ನು ಗಮನದಲ್ಲಿಟ್ಟುಕೊಂಡು ಏಕದಿನ ತಂಡಕ್ಕಾಗಿ ತನ್ನ ಯೋಜನೆಗಳನ್ನು ರೂಪಿಸಲು ಪ್ರಾರಂಭಿಸಿದೆ.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka